ನವ್ಯ ಸಾಹಿತ್ಯ ನಿರ್ಮಾಣ

[ಭಾಷಣಗಳು]

ನಿರ್ದೇಶಕರು:

ಜಿ. ಪಿ. ರಾಜರತ್ನಂ

ಭಾಷಣಕಾರರು:

ಡಿ. ವಿ. ಗುಂಡಪ್ಪ * ಶಿವರಾಮಕಾರಂತ

ಅ. ನ. ಕೃಷ್ಣರಾಯ

ಮಾಸ್ತಿ ವೆಂಕಟೇಶ ಅಯ್ಯಂಗಾರ್

ವಿ. ಸೀತಾರಾಮಯ್ಯ * ಕೆ. ವಿ. ಪುಟ್ಟಪ್ಪ

ಮೈಸೂರು

ಕಾವ್ಯಾಲಯ : ಪ್ರಕಾಶಕರು

ವಿದ್ಯಾ ಪ್ರಸಾರ ಪುಸ್ತಕಗಳು

ನವ್ಯ ಸಾಹಿತ್ಯ ನಿರ್ಮಾಣ

[ಭಾಷಣಗಳು]

ನಿರ್ದೇಶಕರು:
ಜಿ. ಪಿ. ರಾಜರತ್ನಂ

ಭಾಷಣಕಾರರು:
ಡಿ. ವಿ. ಗುಂಡಪ್ಪ
ಶಿವರಾಮ ಕಾರಂತ
ಅ. ನ. ಕೃಷ್ಣರಾಯ
ಮಾಸ್ತಿ ವೆಂಕಟೇಶ ಅಯ್ಯಂಗಾರ್
ವಿ. ಸೀತಾರಾಮಯ್ಯ
ಕೆ. ವಿ. ಪುಟ್ಟಪ್ಪ

ಮೈಸೂರು
ಕಾವ್ಯಾಲಯ : ಪ್ರಕಾಶಕರು

ಮೊದಲ ಮುದ್ರಣ : ೧೯೫೪

The 'Talks' in this booklet are reproduced by kind permission of the All India Radio authorities.

ಬೆಲೆ : ನಾಲ್ಕಾಣೆ

ಮುದ್ರಕರು :

ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ.

ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್

ಮೈಸೂರು

ವಿವರ

ಕೃತಜ್ಞತೆ

'ಆಲ್ ಇಂಡಿಯಾ ರೇಡಿಯೋ' ಮೈಸೂರು ಕೇಂದ್ರದ ಅಧಿಕಾರಿಗಳು ತಾ|| ೧೫-೮-೫೪ರ ಸಂಜೆ ಸ್ವಾತಂತ್ರ್ಯೋತ್ಸವದ ಅಂಗವಾಗಿ ಏರ್ಪಡಿಸಿದ "ನವ್ಯ ಸಾಹಿತ್ಯ ನಿರ್ಮಾಣ" ಎಂಬ ಭಾಷಣ ಮಾಲೆಯಲ್ಲಿ ಶ್ರೀಯುತರುಗಳಾದ ಡಿ. ವಿ. ಗುಂಡಪ್ಪನವರು, ಶಿವರಾಮಕಾರಂತರು, ಅ.ನ. ಕೃಷ್ಣರಾಯರು, ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ವಿ. ಸೀತಾರಾಮಯ್ಯನವರು ಮತ್ತು ಕೆ.ವಿ. ಪುಟ್ಟಪ್ಪನವರು—ಈ ಆರು ಮಂದಿ ಸಾಹಿತಿಗಳು ಭಾಗವಹಿಸಿ ಮಾತನಾಡಿದರು. ಭಾಷಣ ಮಾಲೆಯ ಕಾರ್ಯಕ್ರಮದ ನಿರ್ದೇಶಕರು ಶ್ರೀಮಾನ್ ಜಿ.ಪಿ. ರಾಜರತ್ನಂ ಅವರು. ಈ ಮಹನೀಯರೆಲ್ಲರ ಭಾಷಣಗಳನ್ನು 'ಆಲ್ ಇಂಡಿಯಾ ರೇಡಿಯೋ' ಅಧಿಕಾರಿಗಳ ಕೃಪೆಯಿಂದ ಇಲ್ಲಿ ಪ್ರಕಾಶಪಡಿಸಲಾಗಿದೆ.

ನವ್ಯ ಸಾಹಿತ್ಯ ನಿರ್ಮಾಣ

ಉಪಕ್ರಮ ಭಾಷಣ :

ಜಿ. ಪಿ. ರಾಜರತ್ನಂ

ಭಾರತದ ಸ್ವಾತಂತ್ರ್ಯ ಸಾರ್ಥಕವಾಗಬೇಕಾದರೆ ನಮ್ಮಲ್ಲಿ ಎಂತಹ ಸಾಹಿತ್ಯ ಹೊಸದಾಗಿ ಸೃಷ್ಟಿಯಾಗಬೇಕು ಎಂಬು ದನ್ನು ಬದುಕಿನಲ್ಲಿ ಆಸೆ ಉಳ್ಳವರೆಲ್ಲ ವಿಚಾರ ಮಾಡಬೇಕು. ಸ್ವಂತ ವಿಚಾರದ ಜೊತೆಗೆ, ವಿಚಾರವಂತರ ಮಾತುಗಳಿಗೆ ಕಿವಿ ಗೊಟ್ಟು, ಅದನ್ನು ವಿಮರ್ಶೆಯಿಂದ ಮಥನ ಮಾಡಬೇಕು. ಮಥನಮಾಡಿ ಬಂದ ಸಾರವನ್ನು ಸ್ವಂತ ಜೀವನದಲ್ಲಿ ಅನ್ವಯಿಸಿ ಕೊಂಡು, ಅನುಷ್ಠಾನಕ್ಕೆ ತಂದು, ಸೇವಿಸಿ, ಸತ್ತ್ವಶಾಲಿಗಳಾಗ ಬೇಕು.

ಇದಕ್ಕೆ ಅನುಕೂಲವಾದಂತಹ ಒಂದು ಅಪೂರ್ವಾವಕಾಶ ಈ ಸ್ವಾತಂತ್ರ್ಯೋತ್ಸವದ ಸಂಜೆ ನಮಗೆ ಲಭಿಸಿದೆ. ಈ ಶತ ಮಾನದ ಸಾಹಿತ್ಯೋದಯದ ಕಾಲದಿಂದ ಇದುವರೆಗೂ-ಸುಮಾರು ೨೦-೩೦ ವರುಷಗಳಿಗೂ ಮೇಲ್ಪಟ್ಟು—ಸಾಹಿತ್ಯ ಸೃಷ್ಟಿಯ, ಸಾಹಿತ್ಯ ಸೇವನೆಯ, ಸಾಹಿತ್ಯ ಪರ್ಯುಪಾಸನೆಯ ವೀರಚರ್ಯೆ ಯನ್ನು ನಿರಂತರವಾದ ನಿತ್ಯ ಪರಾಕ್ರಮದಿಂದ ಯಾರು ನಡೆಸಿ ಕೊಂಡು ಬಂದಿರುವರೋ ಅಂತಹವರಲ್ಲಿ ಶಿಖರ ಪ್ರಾಯರಾದ ಆರು ಜನ ಮಹನೀಯರು ಈ ಸಂಜೆ, **ಸಾರ್ಥಕವಾದ ಬದು ಕಿಗೆ ಸಂಬಂಧಿಸಿದ ಸಾಹಿತ್ಯವನ್ನು** ಕುರಿತು ಮಾತನಾಡುವವ ರಾಗಿದ್ದಾರೆ.

ಈ ಆರು ಜನ ಮಹನೀಯರು ಒಂದಲ್ಲ ಒಂದು ವಿಧದಲ್ಲಿ ಕನ್ನಡ ನಾಡಿನಲ್ಲಿ ಪ್ರಾತಃಸ್ಮರಣೀಯರು· ಶ್ರೀಯುತರುಗಳಾದ ಡಿ. ವಿ. ಗುಂಡಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ. ವಿ. ಪುಟ್ಟಪ್ಪ, ಶಿವರಾಮ ಕಾರಂತ, ವಿ. ಸೀತಾರಾಮಯ್ಯ, ಅ. ನ. ಕೃಷ್ಣರಾವ್ ಇವರಲ್ಲಿ ಯಾರನ್ನು ನಮ್ಮ ಜನಕ್ಕೆ ಹೊಸದಾಗಿ ಪರಿಚಯಮಾಡಿಕೊಡಬೇಕಾದ ಆಗತ್ಯ ಉಂಟು! ಅಂಥ ಅಗತ್ಯ ಏನೂ ಇಲ್ಲ ಎಂಬ ಒಂದು ಸೌಲಭ್ಯದಿಂದಲೇ—ನಾನು ಈ ಆರು ಅರಳುತ್ತಿರುವ ಹೂಗಳನ್ನು ಒಂದು ಬಾಸಿಂಗ ಮಾಡುವ ನಾರಾಗಿ, ಇಲ್ಲಿ ಹೀಗೆ ನಾಲಗೆಯಾಡಿಸಲು ಒಪ್ಪಿ ಬಂದಿದ್ದೇನೆ.

ರಾಷ್ಟ್ರ ಸ್ವಾತಂತ್ರ್ಯ ಮತ್ತು ಕಾವ್ಯ ಸ್ಫೂರ್ತಿ

ಡಿ. ವಿ. ಗುಂಡಪ್ಪ

ರಾಷ್ಟ್ರಸ್ವಾತಂತ್ರ್ಯಕ್ಕೂ ಕಾವ್ಯ ಸ್ಫೂರ್ತಿಗೂ ಸಂಬಂಧ ವೇನು ?-ಎಂದು ಯಾರಾದರೂ ಕೇಳಿಯಾರೆ ? ಸ್ವಾತಂತ್ರ್ಯವು ನಮ್ಮ.ಜೀವನಕ್ಕೆ ಸಂಬಂಧ ಪಟ್ಟದ್ದೆಂದು ನಂಬಿರುವವರೆಲ್ಲ ಅದು ಕಾವ್ಯಕ್ಕೂ ಸಂಬಂಧ ಪಟ್ಟದ್ದೆಂದು ಒಪ್ಪಲೇಬೇಕು ; ಏಕೆಂದರೆ, ಮನುಷ್ಯನ ಜೀವನ ರಂಗದಲ್ಲಿ ಕವಿಯನ್ನು ಬರಮಾಡಿಕೊಳ್ಳದ ಸ್ಥಳ ಒಂದಂಗುಲವೂ ಇಲ್ಲ. ಎಲ್ಲೆಲ್ಲಿ ನಮ್ಮ ಮನಸ್ಸು ಹೋಗ ಬಹುದೋ ಅಲ್ಲೆಲ್ಲ ಕವಿಗೆ ಪ್ರವೇಶವುಂಟು. ನಮ್ಮ ಹೃದಯ ಜೀವನದ ಏರಿಳಿತಗಳೇ ಕಾವ್ಯ. ಸ್ವಾತಂತ್ರ್ಯದಿಂದ ಜನ ಜೀವನವು ಒಂದು ನವೀನತೆಯನ್ನು ಪಡೆಯುವುದಾದರೆ, ಆ ನವ ಚೈತನ್ಯವು ಕಾವ್ಯಕ್ಕೆ ಒಂದು ನವ್ಯ ಸ್ಫೂರ್ತಿಯನ್ನು ಕೊಡಬಲ್ಲ ದ್ದಾಗುತ್ತದೆ. ಹಾಗೆಯೇ ಕವಿಯು ಜನ ಸ್ವಾತಂತ್ರ್ಯದ ಸಾಧ್ಯ ಫಲವಾಗಿ ಒಂದು ನವೀನ ಜೀವನ ಸೌಂದರ್ಯವನ್ನು ಕಂಡವ ನಾದರೆ, ಆ ಅಂತರ್ದರ್ಶನ ಅವನ ಕಾವ್ಯದಲ್ಲಿ ರೂಪಗೊಂಡು ಜನಕ್ಕೆ ನವೀನ ಸ್ಫೂರ್ತಿಯಾಗುತ್ತದೆ. ನಮ್ಮ ಜೀವಿತ ಮುಕು ಲದ ವಿಕಾಸಕ್ಕೆ ಸ್ವಾತಂತ್ರ್ಯದ ಸೂರ್ಯರಶ್ಮಿ ಪ್ರೇರಕವಾದರೆ, ಅದರ ಸಾಫಲ್ಯಕ್ಕೆ ಕಾವ್ಯದ ಪೃಥ್ವೀರಸ ಸಾರಪ್ರದವಾಗುತ್ತದೆ. ಹೀಗೆ ಸ್ವಾತಂತ್ರ್ಯದ ಪರಮ ಸಾರ್ಥಕ್ಯವು ಸತ್ಕಾವ್ಯೋದಯ ದಲ್ಲಿ,—ಮತ್ತು ಸತ್ಕಾವ್ಯ ಪ್ರಭಾವದಿಂದ.

ಸ್ವಾತಂತ್ರ್ಯದ ಫಲವಾಗಿ ಈಗ ನಾವು ಬಯಸಬೇಕಾ ದದ್ದು ಎಂಥ ನವೀನ ಜೀವನವನ್ನ ? ಇಂಡಿಯವು ಎರಡನೆಯ

ಇಂಗ್ಲೆಂಡ್ ಆಗಬೇಕೆಂದೆ ? ರಷ್ಯದ ಛಾಯೆಯಾಗಬೇಕೆಂದೆ ? ಅಮೆರಿಕದ ಪ್ರತಿಬಿಂಬವಾಗಬೇಕೆಂದೆ ? ಬಾಂಬಿನ ತಯಾರಿಯಲ್ಲಿ ಎಲ್ಲಕ್ಕಿಂತ ದೊಡ್ಡದೆನಿಸಬೇಕೆಂದೆ ? ಅಥವಾ ಬಾಂಬನ್ನು ಅನವಶ್ಯ ಮಾಡಬಲ್ಲ ಸಾತ್ತ್ವಿಕ ಚಿಕಿತ್ಸೆಯನ್ನು ತೋರಿಸಬೇಕೆಂದೆ ? ಪಾಶ್ಚಾತ್ಯದೇಶಗಳ ಅನುಕರಣವೇ ಇಂಡಿಯದ ಸ್ವಾತಂತ್ರ್ಯಕ್ಕೆ ಪೂರ್ಣಫಲವೆನ್ನುವುದಾದರೆ, ಅದರ ವಿಷಯದಲ್ಲಿ ಯಾರೂ ಉತ್ಸಾಹ ಪಡರು.

ಹಾಗಲ್ಲದೆ ಇಂಡಿಯವು ಇಂಡಿಯವಾಗಿ ಬಾಳುವುದೇ,—ಹಿಂದಿಗಿಂತ ಪ್ರಶಸ್ತವಾದ ಇಂಡಿಯವಾಗುವುದೇ,—ಸ್ವಾತಂತ್ರ್ಯದ ಪರಮ ಪ್ರಯೋಜನವೆನ್ನುವುದಾದರೆ, ಆಗ ನಮಗೊಂದು ಸ್ವಧರ್ಮ ಕುತೂಹಲವುಂಟಾದೀತು, ಲೋಕಕ್ಕೊಂದು ಹೊಸ ಶುಭ ನಿರೀಕ್ಷೆ ಹುಟ್ಟೀತು. ಆ ಇತೋಪ್ಯಧಿಕವಾದ ಇಂಡಿಯದ ರೂಪ ರೇಖೆ ಎಂಥಾದ್ದು ? ಆ ನೂತನ ಇಂಡಿಯದ ಜೀವನ ಪೂರ್ಣತೆ ಎಂಥಾದ್ದು ? ಈ ಪ್ರಶ್ನೆಗಳಿಗೆ ಉತ್ತರ ದೊರಕಿಸಬೇಕಾದವರು ನಮ್ಮ ನವ್ಯ ಕವಿಗಳು.

ಕವಿಯೆಂಬಾತನಲ್ಲಿ ಇತರ ಮನುಷ್ಯರಲ್ಲಿ ಸ್ಫುಟವಾಗಿ ಕಾಣಬಾರದ ಮೂರು ಅಂತರಂಗ ಶಕ್ತಿಗಳು ವಿಶೇಷವಾಗಿರುತ್ತವೆ : ಮೊದಲನೆಯದು, ಲೋಕ ಜೀವನದ ಸೂಕ್ಷ್ಮ ರಹಸ್ಯ ವೇದಿತೆ. ಇದೇ ಅಂತರನುಭವ, ಇದೇ ಪ್ರತಿಭೆ. ಎರಡನೆಯದು ಆ ರಹಸ್ಯಾನುಭವದಿಂದ ಒದಗಿದ ಸಾಮಗ್ರಿಯ ಮೇಲೆ ಸ್ವೋಪಜ್ಞತೆಯ ಪ್ರಯೋಗದಿಂದ,— ಅವನ ರಮ್ಯಾರಮ್ಯ ವಿವೇಕದಂತೆ,—ಅವನ ಹಿತಾಹಿತ ನಿಷ್ಕರ್ಷೆಯಂತೆ,—ಅವನ ಮನೋರಂಗದಲ್ಲಿ ಆದ ನೂತನ ಕಥಾವಿರ್ಭಾವ. ಇದೇ ಕಲ್ಪನ ಸ್ಫೂರ್ತಿ. ಕವಿಯ ಮೂರನೆಯ ಶಕ್ತಿ ಹಾಗೆ ಸಿದ್ಧವಾದ

ಅಂತಸ್ಸೃಷ್ಟಿಯ ಬಹಿರ್ನಿರೂಪಣೆ. ಇದೇ ಕಾವ್ಯರಚನೆ. ಇದೇ ವಾಕ್ಸಿದ್ಧಿ.

ಕವಿಯ ಹೃದಯ ಗುಹೆಯಲ್ಲಿ ನಿದ್ರಿಸುತ್ತಿರುವ ಸ್ಫೂರ್ತಿಯನ್ನು ಚುಚ್ಚಿ ಎಬ್ಬಿಸಬಲ್ಲ ಸಲಾಕಿ ಅವನ ಸುತ್ತ ಮುತ್ತಣ ಪ್ರಪಂಚದ್ದು. ಹೊರಗೆ ಮಹಾನುಭವವಾದಾಗ ಅವನ ಒಳಗೆ ಮಹಾಸ್ಫೂರ್ತಿ. ಎಷ್ಟೋ ಸಹಸ್ರವರ್ಷಗಳ ಹಿಂದೆ ಈ ದೇಶದಲ್ಲಿ ಜನಪದ ಜೀವನಕ್ಕೆ ಕೇಂದ್ರವಾಗಿದ್ದ ಒಂದು ಕುಟುಂಬದ ಹಾಲಿನ ಪಾತ್ರೆಯಲ್ಲಿ ಯಾರೋ ಹುಳಿ ಹಿಂಡಿದರು; ತ್ಯಾಗ ವೀರಗಳು ಉಕ್ಕಿದವು; ವಾಲ್ಮೀಕಿಯ ಕಂಠ ಕರುಣಗದ್ಗದಿತ ವಾಯಿತು. ಇನ್ನೊಮ್ಮೆ ರಾಷ್ಟ್ರದ ನಡುವಣ ಮನೆಯೊಲೆಯಲ್ಲಿ ಯಾರೋ ಹಸಿ ಸೌದೆಯಿಂದ ಹೊಗೆ ಹಾಕಿದರು. ಧರ್ಮ ಶೌರ್ಯಗಳು ಮೈತುಂಬಿ ನಿಂತವು; ವ್ಯಾಸನ ಕಣ್ಣು ಕರುಣ ಗಂಭೀರವಾಯಿತು. ಒಮ್ಮೆ ಇಟಲಿಯಲ್ಲಿ ಸಮಾಜವನ್ನು ಧಾರ್ಮಿಕ ಸಂದೇಹಗಳೂ ನೀತಿ ಚಾಂಚಲ್ಯಗಳೂ ಕುಲುಕಿಸುತ್ತಿದ್ದುವು. ಡಾಂಟೆಯ ಮನಸ್ಸು ಚಿಂತಾಂತರ್ಮುಖಿಯಾಯಿತು. ಮತ್ತೊಮ್ಮೆ ಇಂಗ್ಲೆಂಡಿನಲ್ಲಿ ಜನತೆಯನ್ನು ಮಹಾಸಾಹಸಗಳೂ ಮಹೋತ್ಸಾಹಗಳೂ ಸಂಭ್ರಮಪಡಿಸಿದ್ದವು; ಷೇಕ್ಸ್‌ಪಿಯರಿನ ದೃಷ್ಟಿ ಮಾನುಷ ಸೂಕ್ಷ್ಮದರ್ಶಿನಿಯಲ್ಲಿ ಏಕಾಗ್ರವಾಯಿತು. ಹೀಗೆ ಲೋಕ ಜೀವನದಲ್ಲಿ ಪ್ರಶ್ನೆ ತೋರಿದರೆ, ಕವಿಯ ಅಂತಃಕರಣದಲ್ಲಿ ಪ್ರತ್ಯುತ್ತರ ಹೊರಡುತ್ತದೆ.

ಇಂದಿನ ಜಗಜ್ಜೀವನದಲ್ಲಿ ಪ್ರಶ್ನೆಯಿಲ್ಲವೆಂದು ಯಾರಾದರೂ ಹೇಳಿಯಾರೆ? ನಮಗೆ ಪ್ರಗತಿ ಗುರುವೆನಿಸಿದ್ದ ಪಾಶ್ಚಾತ್ಯ ಲೋಕವು ಆ ಪ್ರಗತಿಯಿಂದ ಪಡುತ್ತಿರುವ ಪಾಡನ್ನು ಈ ಹೊತ್ತು ನಾವು ಕಾಣುತ್ತಿದ್ದೇವೆ. ಅಲ್ಲಿಯ ಪ್ರಕೃತಿ ವಿಜ್ಞಾನದಿಂದ

ಹಿತಸಿದ್ಧಿ ಅಹಿತ ಸಮೃದ್ಧಿಗಳೆರಡೂ ಆಗಿವೆ. ಹಳೆಯ ಮತ ಧರ್ಮಗಳು ಪ್ರಪಂಚ ವಸ್ತುಗಳಿಗೆ ಕಟ್ಟಿದ್ದ ಬೆಲೆಗಳನ್ನು ವಿಜ್ಞಾನದ ಅತೀರೆಕವೂ ಆತುರವೂ ಬದಲಾಯಿಸಿವೆ. ವಿಜ್ಞಾನ ಸಂಧಾನದ ಭೋಗೋಪಕರಣ ಮಹಿಮೆಯಿಂದ ಲೋಭ ಮೋಹಗಳಿಗೆ ನಮ್ಮ ಜೀವಿತದ ಮೇಲೆ ಪೂರ್ಣಾಧಿಕಾರ ದೊರೆತಿದೆ. ಇಹ ಜೀವನದ ಅಂತಸ್ತನ್ನು (standard of living) ಹೆಚ್ಚಿಸಿಕೊಳ್ಳಬೇಕೆಂಬುದೊಂದೇ ಈಗ ಜನ ಜನಾಂಗಗಳ ಪರಮ ಧ್ಯೇಯವಾಗಿದೆ. ಇದಕ್ಕಾಗಿ,—ಭೂಸ್ವಾಮ್ಯಕ್ಕಾಗಿ, ಲೋಹಕ್ಕಾಗಿ, ಕಲ್ಲಿದ್ದಿಲಿಗಾಗಿ, ಕಲ್ಲೆಣ್ಣೆಗಾಗಿ, ಕಾಡಿಗಾಗಿ, ಕಾರ್ಖಾನೆಯ ಸರಕಿಗಾಗಿ, ವ್ಯಾಪಾರದ ಗಿರಾಕಿಗಾಗಿ,—ದೇಶ ದೇಶಕ್ಕೆ, ಜಾತಿ ಜಾತಿಗೆ, ಮನುಷ್ಯ ಮನುಷ್ಯನಿಗೆ ಸ್ಪರ್ಧೆ, ಅಸೂಯೆ, ಯುದ್ಧ, ಯುದ್ಧ ಭಯ, ಯುದ್ಧ ಸಿದ್ಧತೆ—ಇವು ಸಂಭವಿಸಿವೆ. ಭೂಮಂಡಲದೊಳಗೆ ನೆಮ್ಮದಿಯ ನೆಲೆ ಎಲ್ಲಿಯೂ ಕಾಣಬಾರದು. ಬಾಳಿನಲ್ಲಿ ಹಳೆಯ ಚೆಂದ ಹೋಗಿದೆ; ಹೊಸ ಚೆಂದದ ಸೂಚನೆ ಬಾರದಿದೆ. ಈ ವಿಷಮ ಸಂಧಿಯಲ್ಲಿ ನಮ್ಮ ಕವಿಗಳ ಕಣ್ಣಿಗೇನಾದರೂ ಒಂದು ನವ್ಯ ಕಲ್ಯಾಣದ ದರ್ಶನ ದೊರೆತೀತೆ? ಎಂಬುದು ನಮ್ಮ ಆಶೆ.

ಈ ಭ್ರಾಂತಿ ಸಂಕ್ಷೋಭೆಯ ಶತ ಚಕ್ರ ಕೋಟೆಯನ್ನು ಲೋಕವು ಧರ್ಮಪ್ರಭೆಯಿಂದ ದಾಟಲಾದೀತೆಂದು ಹೇಳುವುದಾದರೆ ಅದು ಸದ್ಯಕ್ಕೆ ಬರಿಯ ಮಾಮೂಲಿನ ಹರಕೆ ಮಾತಿಗಿಂತ ಹೆಚ್ಚಿನದೆನಿಸಲಾರದು. ಧರ್ಮವೆಂದರೆ ಏನು? ಅದರ ಮೂಲ ತತ್ತ್ವಗಳು ನಮ್ಮ ವೇದ ಶಾಸ್ತ್ರಗಳಲ್ಲಿವೆ ಎನ್ನೋಣವೆ? ಪುಸ್ತಕ ಮಾತ್ರದಲ್ಲಿದ್ದು ಪ್ರಯೋಗದಲ್ಲಿ ಕಾಣಬಾರದ ತತ್ತ್ವವು ಗಾಜಿನ ಪೆಟ್ಟಿಗೆಯೊಳಗಿರುವ ನಿರ್ಜೀವ ದೇಹದಂತೆ ತಾನೆ? ಒಂದು

ತತ್ತ್ವವು ಜೀವಂತವೆನಿಸಬೇಕಾದರೆ ಅದು ಲೋಕ ಪ್ರಸಂಗಗಳಿಗೆ ಅನ್ವಯಿಸಿಕೊಂಡಿರಬೇಕು. ಅನುಷ್ಠಾನ ಸಾಧ್ಯವಲ್ಲದ ತತ್ತ್ವ ಎಷ್ಟು ಉದಾತ್ತವಾಗಿದ್ದರೆ ಏನು? ಮಹರ್ಷಿಗಳು ಸಾರಿರುವ ತತ್ತ್ವಗಳನ್ನು ಇಂದಿನ ಪ್ರಶ್ನೆಗಳಿಗೆ ಅನ್ವಯ ಮಾಡುವುದು ಹೇಗೆ? ನಮ್ಮ ಸಮಾಜದ ತಳಹದಿ ಕದಲಿ ಹೋಗಿದೆ. ಹಿಂದಿನಿಂದ ಬಂದ ಆಚಾರ ಸಂಪ್ರದಾಯಗಳು ಅಳಿಸಿ ಹೋಗುತ್ತಿವೆ. ಹಳೆಯ ನಂಬಿಕೆಗಳು ಮಾಸಿವೆ. ಮನು ಪರಾಶರರ ಕಟ್ಟು ಪಾಡುಗಳನ್ನು ಇಂದಿನ ಪರಿಸ್ಥಿತಿಯಲ್ಲಿ ಅಕ್ಷರಶಃ ಪಾಲಿಸಲಾದೀತೆ? ಇಂದಿನ ಪ್ರಪಂಚದಿಂದ ನಾವು ಬೇರೆಯಾಗಿ ಬಾಳುವುದು ಸಾಧ್ಯವೆ? ಅದು ಅವಶ್ಯವೆ? ಅದು ಯುಕ್ತವೆ? ಅಥವಾ ಈ ಪುರಾತನ ಸಮಾಜವನ್ನು ನೂತನ ಭಾವನೆಗಳಿಗೆ ಒಪ್ಪುವಂತೆ,- ವ್ಯಕ್ತಿಯ ಸ್ವಾತಂತ್ರ್ಯವೂ ಸಮಷ್ಟಿಯ ನಿಯಮವೂ ಹೊಂದಿಕೊಂಡಿರುವಂತೆ,-ಪುನರ್ವ್ಯವಸ್ಥೆ ಮಾಡುವುದು ಸಾಧ್ಯವೆ? ಇದು ಪ್ರಶ್ನೆ. ಇಂದಿನ ನವ ನಾಗರಿಕತೆಯೆಲ್ಲವೂ ತುಚ್ಛವೆನ್ನುವುದು ನ್ಯಾಯವಾಗದು. ಈ ನಾಗರಿಕತೆ ಮನುಷ್ಯನ ಸ್ವಭಾವಸಿದ್ಧವಾದ ಪ್ರಗತಿಯಲ್ಲಿ ಒಂದು ಘಟ್ಟ. ಅದನ್ನು ದೂಷಿಸಲು ಕಾರಣವಿಲ್ಲ. ಅದನ್ನು ಅರ್ಥಮಾಡಿಕೊಳ್ಳುವುದು ಪ್ರಯೋಜನದ ದಾರಿ. ದೋಷವಿರುವುದು ಭೌತ ವಿಜ್ಞಾನದಲ್ಲಲ್ಲ, ಭೌಮ ಸಂಪತ್ತಿನಲ್ಲೂ ಅಲ್ಲ; ಆ ವಿಜ್ಞಾನವನ್ನೂ ಆ ಸಂಪತ್ತನ್ನೂ ನಾವು ಉಪಯೋಗಿಸಿ ಕೊಳ್ಳುತ್ತಿರುವ ರೀತಿಯಲ್ಲಿ. ನಮ್ಮ ಉದ್ದೇಶ ವಿಧಾನಗಳಲ್ಲಿ ನಾವು ದೋಷವನ್ನು ಹುಡುಕಿಕೊಳ್ಳುವುದು ಯುಕ್ತವಾಗಿದೆ. ಹೀಗೆ ನಮಗೆ ಈಗ ಆಗ ಬೇಕಾಗಿರುವುದು ನೀತಿ ಪರಿಶೋಧನೆ ಮತ್ತು ಒಂದು ನವನೀತಿ ಶಾಸನ. ನೀತಿಯಾದರೋ ಹೃದಯ ಬುದ್ಧಿಗಳ ಶಿಶು. ಆ ಅಂತರಂಗ ದಂಪತಿ

ಗಳಲ್ಲಿ ಹೃದಯವನ್ನು ಸೊಗಸುಗೊಳಿಸಿ ಅದರ ಪ್ರಭಾವದಿಂದ ಬುದ್ಧಿಯನ್ನು ತಿದ್ದಿಸುವ ಕೆಲಸ ಕಾವ್ಯದ್ದು.

ಈಗ ಲೋಕ ಕಾದಿರುವುದು ಅಂಥ ಮಹಾ ಕಾವ್ಯಕ್ಕಾಗಿ. ಕಾವ್ಯದಿಂದ ನಮಗೆ ಈಗ ಆಗಬೇಕಾದದ್ದು ಮನೋರಂಜನೆ ಮಾತ್ರವಲ್ಲ, ಮಹತ್ತ್ವ ದರ್ಶನ. ಅಷ್ಟಿಷ್ಟು ಸ್ವಾರಸ್ಯವುಳ್ಳ ಕಾವ್ಯ ಎಲ್ಲ ದೇಶಗಳಲ್ಲೂ ಯಾವಾಗಲೂ ಇರುತ್ತದೆ. ವಿರಳವಾದದ್ದು ಉದ್ಧಾರಕವಾದ ಕಾವ್ಯ. ಒಂದು ಹೊಸ ವಿಶ್ವಧರ್ಮದರ್ಶನ, ಒಂದು ಹೊಸ ಜೀವಿತಾರ್ಥ ದೃಷ್ಟಾಂತ, ಒಂದು ಹೊಸ ಇಹಪರ ಸಮನ್ವಯಾದರ್ಶ—ಇದನ್ನು ದೊರಕಿಸಬಲ್ಲ ಕಾವ್ಯ ಇಂದು ನಮಗೆ ಬೇಕಾದದ್ದು. ಅದು ಮಹಾ ಭಾರತದ ಗೀತೆಯ ಪರ್ವವೆನಿಸಬೇಕು ; 'ಡಿವೈನ್ ಕಾಮೆಡಿ' (Divine Comedy) ಯ ಛನೆಯ ಉಲ್ಲಾಸವೆನಿಸಬೇಕು. ಅದು ಪದ್ಯವೋ, ಗದ್ಯವೋ, ನಾಟಕವೋ, ಕಾದಂಬರಿಯೋ, ಚರಿತ್ರೆಯೋ, ಮನನ ಮಾಲೆಯೋ, ಯಾವ ಶೈಲಿಯೋ ಯಾವ ಪಾಕವೋ—ನಮಗೆ ಅದರಿಂದ ಆಗಬೇಕಾದ ಉಪಕಾರ ಜೀವ ನವೀಕರಣ. ಅದು ಕೇವಲ ಭಾವಾವೇಶವಾಗಿದ್ದರೆ ಸಾಲದು ; ಅದರಲ್ಲಿ ತತ್ತ್ವಚಿಂತನೆಯ ಸಾರದ್ರವ್ಯವೂ ಇರಬೇಕು. ಹೃದಯ ರಸ ಪ್ರವಾಹವು ಪ್ರಾಶ್ನಿಕ ಬುದ್ಧಿಯನ್ನು ಸಮಾಧಾನಗೊಳಿಸುವಂತೆ ಹರಿಯಬೇಕು. ವಿಶ್ವ ಜೀವನದ ನಾನಾ ಶಕ್ತಿ ವೈಭವಗಳೂ ನಾನಾ ವಿಚಾರ ವಾಹಿನಿಗಳೂ ನಾನಾರಾಗ ವಿಲಾಸಗಳೂ ಅದರಲ್ಲಿ ಕೂಡಿಕೊಂಡು ನಮಗೊಂದು ಹೊಸ ಆಶೆಯನ್ನೂ ಹೊಸ ಬೆಳಕನ್ನೂ ಸೂಸಬೇಕು.

ಇಂಥ ಜೀವತಾರಕ ಕಾವ್ಯದ ಉತ್ಪತ್ತಿಗೆ ಬೇಕಾದ ಸ್ಫೂರ್ತಿಯು ತಪಸ್ಸಿಲ್ಲದೆ ಲಭ್ಯವಾದೀತೆ? ತಪಸ್ಸು ಮಾಡ

ಬೇಕಾದವರು ಕವಿತಾ ಸಾಮರ್ಥ್ಯವುಳ್ಳವರು ಮಾತ್ರವೇ ಅಲ್ಲ; ದೇಶದ ಎಲ್ಲ ವಿದ್ಯಾವಂತರೂ ಎಲ್ಲ ವಿಚಾರಶೀಲರೂ ತಮ್ಮ ತಮ್ಮ ಜೀವನ ಕ್ಷೇತ್ರಗಳಲ್ಲಿ ತಪಸ್ಸುಮಾಡಬೇಕು. ರಾಮಾವತಾರಕ್ಕಾಗಿ ಋಷಿಗಳು ತಪಸ್ಸು ಮಾಡಿದರು, ದಶರಥನು ಯಾಗ ಮಾಡಿದನು. ಮಹಾಕಾವ್ಯೋದಯಕ್ಕಾಗಿ ದೇಶದ ಮಹಾಜನರು ಮಡಿಯುಡಬೇಕು. ಕವಿಯು ದೀಕ್ಷೆ ತೊಡಬೇಕು. ಇಂಡಿಯದ ರಾಷ್ಟ್ರಕರು ಗತಾನುಗತಿಕತೆಯಿಂದ ತೃಪ್ತರಾಗದೆ ದೇಶದ ಸ್ವಭಾವವನ್ನು, ಅದರ ಸನ್ನಿವೇಶಗಳನ್ನು, ಅದರ ಇತಿಹಾಸವನ್ನು, ಅದರ ಆತ್ಮದೊಳಗೆ ಅಡಗಿರುವ ಗುಣರುಚಿ ಪ್ರವೃತ್ತಿಗಳನ್ನು ಪರೀಕ್ಷಿಸಿ, ಸ್ವಧರ್ಮದ ಪುನರ್ದರ್ಶನವನ್ನು ಸಂಪಾದಿಸಬೇಕು. ಕವಿಯು ಲೋಕದ ಹೃದಯಾಂತರಾಳದಲ್ಲಿ ಕುದಿಯುತ್ತಿರುವ ಕೊರಗು ಕೋರಿಕೆಗಳ ಕಾವನ್ನು ತಾನು ಅನುಭವಿಸಿ ಉದಾತ್ತ ಜೀವನ ಚಿತ್ರವನ್ನು ಕನಸು ಕಾಣಬೇಕು. ಈ ವಿಧವಾದ ಧರ್ಮ ಪರಾಮರ್ಶೆಗಾಗಿ ಸ್ವಾತಂತ್ರ್ಯವು ಉಪಯುಕ್ತವಾದರೆ, ಆ ಪರಾಮರ್ಶೆಯಿಂದ ಆಗುವ ನೂತನಮನೋಬುದ್ಧಿ ವಿಕಾಸವು ನವ್ಯ ಕಾವ್ಯಕ್ಕೆ ಸ್ಫೂರ್ತಿಪ್ರದವಾದೀತು.

ಜಗತ್ತಿನಲ್ಲಿ ಎಷ್ಟೋ ದೇಶಗಳು ಎಷ್ಟೋ ಕಾಲದಿಂದ ಸ್ವತಂತ್ರವಾಗಿಯೇ ಇವೆ. ಅಲ್ಲೆಲ್ಲ ಮಹಾಕಾವ್ಯಗಳು ಎಷ್ಟೆಷ್ಟು ಉದಿಸಿವೆಯೆಂದು ನೋಡಿದರೆ, ಕಾವ್ಯಕ್ಕೆ ನಿಜವಾದ ಉತ್ಪತ್ತಿಸ್ಥಾನ ಸ್ವಾತಂತ್ರ್ಯವಲ್ಲ, ಸ್ವಾತಂತ್ರ್ಯದ ವಿನಿಯೋಗ ನಯ ಎಂದು ತೋರಿ ಬರುತ್ತದೆ. ಕಾವ್ಯಶ್ರೀ ಸಮುದಯವಾಗುವುದು ಜನತಾ ಹೃದಯ ಸಮುದ್ರದಿಂದ,—ಕವಿಕೃತ ಮಂಥನದಿಂದ. ಈ ಸಮುದ್ರ ಮಥನಕ್ಕೆ ಅವಕಾಶವನ್ನೂ ಪ್ರೇರಣೆಯನ್ನೂ ಒದಗಿಸುವುದು ರಾಷ್ಟ್ರಸ್ವಾತಂತ್ರ್ಯ.

ಹೊಸ ಸಾಹಿತ್ಯ ರೂಪಗಳು

ಶಿವರಾಮ ಕಾರಂತ

ಈ ಶತಮಾನದ ಆದಿಯಿಂದಲೇ ಕನ್ನಡ ಸಾಹಿತ್ಯದಲ್ಲಿ ಹೊಸ ಬಗೆಯ ಬೆಳವಣಿಗೆ ತೊಡಗಿತಾದರೂ ತೀರ ಸ್ಪಷ್ಟವಾದ ಬದಲಾವಣೆಗಳು ಕಾಣಿಸ ತೊಡಗಿದ್ದು ಈ ನಾಲ್ವತ್ತು ವರ್ಷಗಳಿಂದ. ಅವುಗಳ ಸಿಂಹಾವಲೋಕನ ಕೊಡುವುದು—ಈ ಚಿಕ್ಕ ಭಾಷಣದ ಉದ್ದೇಶ. ಇದು ಹೆಚ್ಚಾಗಿ ಸಾಹಿತ್ಯ ರೂಪಕ್ಕೆ ಸಂಬಂಧಿಸಿದ್ದು.

ಸಾಹಿತ್ಯದ ಉದ್ದೇಶವಾಗಲೀ, ಇತರ ಕಲೆಗಳ ಉದ್ದೇಶವಾಗಲೀ, ವ್ಯಕ್ತಿಯ ಅನುಭವಗಳ ಒತ್ತಡವನ್ನು ಯಾವುದಾದರೊಂದು ಕಲಾ ಸಾಧನದ ಮೂಲಕ ಪ್ರಕಟಿಸುವುದು. ಆ ಸಾಧನ ಗೀತ, ನೃತ್ಯ, ಬರಹ, ಯಾವುದೇ ಇರಬಹುದು. ಹೀಗೆ ಪ್ರಕಟವಾದ ಸಾಧನಗಳ ಉದ್ದೇಶವೇನು? ಅವು ಯಾವ ಭಾವಾನುಭವಗಳ ಬಿಂಬವನ್ನು ಹೊತ್ತು ತರುತ್ತವೆಯೋ ಅವುಗಳು ಅನ್ಯರಿಗೆ ಪರಿಚಯವಾಗುವ ರೀತಿಯಲ್ಲಿ ಮೈಯನ್ನು ಪಡೆದು ಹೊರಗೆ ಬರುವುವಲ್ಲದೆ ಬೇರೆ ಅಲ್ಲ. ಹೀಗೆ ಮಾಡುವಾಗ ಒಂದೊಂದು ದೇಶ, ಕಾಲ, ಜನಸಮುದಾಯ ತನ್ನದಾದ ಒಂದೊಂದು ಶೈಲಿಯನ್ನು ನಿರ್ಮಿಸಿಕೊಳ್ಳುತ್ತದೆ. ಜನಕ್ಕೆ ಈ ಶೈಲಿಯ ಪರಿಚಯವಾದಷ್ಟೂ ಅವುಗಳ ಮೂಲಕ ಪ್ರಕಟವಾಗುವ ಭಾವ ಬಿಂಬ ಗಳನ್ನರಿಯುವುದು ಸುಲಭವಾಗುತ್ತದೆ. ಆದುದರಿಂದಲೇ ಕಲೆ ಇಲ್ಲವೆ ಸಾಹಿತ್ಯದ ಹೊರಗಿನ ರೂಪ ಬದಲಾದೊಡನೆ

ಸಾಂಪ್ರದಾಯಿಕವಾಗಿ ಬಂದ ಶೈಲಿಯನ್ನು ಒಬ್ಬ ಲೇಖಕ ಇಲ್ಲವೆ ಕಲಾವಿದ ಬಿಟ್ಟೊಡನೆಯೇ ವಿಮರ್ಶಕರು, ಓದುಗರು ಕೂಗೆಬ್ಬಿಸುತ್ತಾರೆ.—'ಹೋಯಿತು ಸಾಹಿತ್ಯ, ಗೀತ' ಎಂದು.

ನೋಡಿದರೆ-ಪ್ರಪಂಚಕ್ಕೆಲ್ಲಾ ಒಂದೇ ಶೈಲಿ ಇದೆಯೆ? ಸಾಹಿತ್ಯದಲ್ಲೂ ವಿವಿಧ ಕಲೆಗಳಲ್ಲೂ ಒಂದೊಂದು ದೇಶಕ್ಕೂ, ಕಾಲಕ್ಕೂ ಒಂದೊಂದು ಶೈಲಿ, ರೀತಿ ಹುಟ್ಟಿ ಮಾಯವಾದುದನ್ನು ಕಾಣುತ್ತೇವೆ. ಚಿತ್ರ, ಗೀತ, ನೃತ್ಯ, ಶಿಲ್ಪ ಇವುಗಳಲ್ಲಂತೂ ಒಂದೊಂದು ಜನಾಂಗದ ರೀತಿ, ಶೈಲಿಗಳು ಭಿನ್ನ ಭಿನ್ನವಾಗಿವೆ. ಕೆಲವರವು ಹೆರವರಿಗೆ ಅರ್ಥವಾಗುವಂತೆಯೇ ಇಲ್ಲ. ಉದಾಹರಣೆಗೆ ಪಾಶ್ಚಾತ್ಯರ ಗೀತ, ಸಂಗೀತಗಳು ನಮಗೆಷ್ಟು ಮೆಚ್ಚಿಕೆ?

ಅದರಂತೆ ಒಂದೇ ನಾಡಿನಲ್ಲೂ ಕಾಲದಲ್ಲೂ ಕಾರಣಾಂತರಗಳಿಂದ ಇಂತಹ ಬದಲಾವಣೆಗಳು ಉಂಟಾಗುತ್ತವೆ. ಇವುಗಳಿಗೆ ಎರಡು ಮುಖ್ಯ ಕಾರಣಗಳಿವೆ. ಒಂದು-ಕಲಾವಿದನಿಗೆ ಪೂರ್ವ ಪರಂಪರೆಯಿಂದ ಬಂದ ಶೈಲಿ ತನ್ನ ಹೊಸ ನೋಟಗಳನ್ನು ಪ್ರಕಟಿಸಲು ಬರುವ ಅಡಚಣೆ, ನಿರ್ಬಂಧ. ಆತ ಧೈರ್ಯವಂತನಾದರೆ ಅದನ್ನು ಬಿಟ್ಟೋ ಬದಲಿಸಿಯೋ ಮುಂದುವರಿಯುತ್ತಾನೆ. ತನ್ನದಾದ ಹೊಸ ಸೃಷ್ಟಿ ಮಾಡಬಹುದು, ಅನ್ಯ ಸಂಪ್ರದಾಯಗಳಲ್ಲಿರುವ ರೂಪುಗಳನ್ನು ತಾನು ತಂದುಕೊಳ್ಳಬಹುದು.

ಇನ್ನೊಂದು ಮುಖ್ಯ ಕಾರಣ, ಸಾಂಪ್ರದಾಯಿಕ ಶೈಲಿಗಳಿಂದ ಬೇಸರ ಹುಟ್ಟಿ, 'ಏನೋ ಕಂಡದ್ದನ್ನೇ ಕಾಣುವುದು', 'ಕೇಳಿದ್ದನ್ನೇ ಕೇಳುವುದು'-ಎಂಬುದರಿಂದ ನವೀನ ಪ್ರಯೋಗಗಳನ್ನು ಮಾಡುವುದು. ನಿತ್ಯ ನಿತ್ಯ, ಮನೆಯ ಕ್ರಾಂತಿಯ ಹೆಸ

ರಿಲ್ಲದೆ ಅಡಿಗೆ ಬದಲಾಗುವುದಿಲ್ಲವೆ? ಕನ್ನಡ ಸಾಹಿತ್ಯ ಇದಕ್ಕೆ ಹೊರತೆಂದರೆ ಹೇಗೆ? ನಾವು ಗಮನಿಸಬೇಕಾದ ಮುಖ್ಯ ಸಂಗತಿ–ಬಂದಿರುವ, ಬರುತ್ತಿರುವ ಹೊಸ ರೂಪಗಳು ಹೊಸ ಭಾವನೆಗಳಿಗೆ ಎಷ್ಟು ಸಹಾಯವಾಗಿವೆ, ಅಥವಾ ಇಲ್ಲ, ಎಂಬುದನ್ನಷ್ಟೆ ನೋಡಿದರಾಯಿತು.

ಮೊದಲು ನಮ್ಮ ಪದ್ಯಗಳನ್ನು ಕುರಿತು ವಿಚಾರಿಸುವ. ಪ್ರಾಚೀನ ಕನ್ನಡ ಕವಿಗಳು ಸಂಸ್ಕೃತ ಛಂದೋ ರೂಪಗಳನ್ನು ಎಷ್ಟೋ ಕಾಲ ಅನುಸರಿಸಿ ಬಂದರು. ಅವು ಕನ್ನಡದ್ದಲ್ಲ. ಸಂಸ್ಕೃತ ಅನುವಾದಗಳ ಹುಚ್ಚಿನಿಂದ ಕಾವ್ಯ ಶರೀರ, ಕಾವ್ಯ ವಸ್ತುಗಳೆರಡನ್ನೂ ತರಲು ಮಾಡಿದ ಪ್ರಯತ್ನಗಳು ಅವು. ಈಗ ಆರ್ಯ ದ್ರಾವಿಡ ಸಂಪ್ರದಾಯಗಳ ಮಿಲನವಾಗಿ ಎಷ್ಟೋ ಕಾಲವಾದಮೇಲೆ ಈ ಅನ್ಯವಸ್ತು ನಮ್ಮದಾಗಿ ಕಾಣುತ್ತಿದೆ.

ಅನಂತರ ಕನ್ನಡದ ರಗಳೆ ಷಟ್ಪದಿ ರೂಪಗಳು, ಸಾಂಗತ್ಯ ಮೊದಲಾದುವು ಬಂದವು. ಇವು ಕನ್ನಡದವು. ಈ ಶತಮಾನದ ಆದಿಯ ತನಕವೂ ನಮ್ಮ ರೀತಿಯೆಂದು ನಾವು ಒಪ್ಪಿ ಬಂದ ರೂಪಗಳು.

ಈ ಶತಮಾನದ ಹೊಸಗನ್ನಡ ಕವಿಗಳಾದ ಶ್ರೀ ಗೋವಿಂದ ಪೈ, ಶ್ರೀ ಶ್ರೀನಿವಾಸರು ಇಂಗ್ಲೀಷಿನ ಸರಳ ರಗಳೆಗಳ ಅನುಕರಣ ಮಾಡಿದಾಗ ಏನು ಕೋಲಾಹಲವಾಗಲಿಲ್ಲ. ಅವನ್ನು ಬೋಳು ಕವಿತೆಗಳೆಂದು ಕರೆದ ನಮ್ಮ ಮಡಿವಂತಿಗೆ ಎಷ್ಟಿತ್ತು? ಈ ಹೊಸ ದಾರಿಯೂ ಮುಂದುವರಿದು ಈಗ ನಮಗೆ ರೂಢಿಯಾಗಿದೆ. ಆದರೆ ಈ ಹೊಸತು ಅನ್ಯದೇಶೀಯ ಅನುಕರಣೆ; ನಮ್ಮ ಸೃಷ್ಟಿಯಲ್ಲ;–ಇದು ಹಳೆಯ ಬೇಸರ ಮುರಿದಂತೆ. ಇದು ಹೊಸ ಭಾವನೆಗಳಿಗೆ ಅನಿವಾರ್ಯವೇ, ಅನುಕೂಲವೇ ಎಂಬುದನ್ನು

ಅವರವರ ಬರವಣಿಗೆಗಳನ್ನು ಎಣಿಸಿಯೇ ಹೇಳಬೇಕು. ' ಗೊಲ್ಗೊಥಾ ' ಅದರ ಸಾರ್ಥಕ್ಯ ಹೇಳುತ್ತದೆ.

ಇದರಿಂದ ಕೆಲವು ಕವಿಗಳು ಬಂಗಾಲೀ ಪದ್ಯ ರೂಪಗಳನ್ನು ಕನ್ನಡ ಪದ್ಯಗಳಿಗೆ ತಂದುಕೊಟ್ಟರು. ಅಂಥವರಲ್ಲಿ ಶ್ರೀ ಪುಟ್ಟಪ್ಪನವರು ಮುಖ್ಯರು. ಅವರೇ ಸೃಜಿಸಿದ ಹೊಸ ರೂಪಗಳೂ ಇವೆ. ಅವು ಕನ್ನಡ ಪದ್ಯ ರೂಪದ ಚೆಲುವನ್ನು ಹೆಚ್ಚಿಸಿಲ್ಲವೆ ?

ಇಲ್ಲಿ ಇನ್ನೊಂದು ಮುಖ್ಯ ಕಾಣಿಕೆ ಇದೆ. ಕನ್ನಡದ ಪದ್ಯ ರೂಪ ಎಂದು ಮಡಿವಂತಿಗೆ ಕಾಯುತ್ತಿದ್ದ ನಮ್ಮ ಹಲವರಿಗೆ ಕನ್ನಡ ಜಾನಪದ ಗೀತಗಳಲ್ಲಿ ಪ್ರಕಟವಾದ ನೂರಾರು ರೂಪಗಳು ಕಾಣಿಸಲಿಲ್ಲ. ಅವುಗಳಿಂದ ಶಕ್ತಿ ಪಡೆದು ಅನ್ಯರನ್ನು ಅನುಕರಿಸದೆಯೇ ಸೃಷ್ಟಿಮಾಡ ತೊಡಗಿದ ಬೇಂದ್ರೆಯವರ ಕವನ ರೂಪಗಳು ತಾರಂಗಿಕಾ ಸೌಂದರ್ಯದ ಮುತ್ತಿನ ಮಣಿಗಳಲ್ಲವೆ?

ಪು. ತಿ. ನರಸಿಂಹ ಆಚಾರ್ಯರು ಗೀತ ಮಾಧುರ್ಯದ ತಾರಂಗಿಕತೆಯನ್ನು ಪದ್ಯಕ್ಕೆ ಮೇಳವಿಸಿ ಬರೆದ ಅವರ ಗೀತನಾಟಕಗಳ ಹಲವು ಪದ್ಯಗಳು ಸುಂದರವಾದ ಹೊಸ ಸೃಷ್ಟಿಗಳು. ವಿ. ಸೀ. ಯವರ ಕವನಗಳನೇಕ ಅವೇ ಮಾದರಿಯ ನಿದರ್ಶನಗಳು.

ತೀರ ಈಚೆಗೆ ಬರುತ್ತಿರುವ ಶ್ರೀ ಗೋಕಾಕ, ಅಡಿಗ, ಶರ್ಮ, ಎಕ್ಕುಂಡಿ, ಕಣವಿ ಇವರ ದಾರಿ ಮತ್ತೂ ಒಂದು. ಅವರ ನವ್ಯಕವಿತೆಗಳಲ್ಲಿ ಬಾಹ್ಯ ರೂಪಕ್ಕಿಂತ ಕಾವ್ಯ ಧರ್ಮದಲ್ಲೆ ವ್ಯತ್ಯಾಸವಿದೆ. ಆ ಕವನಗಳು ವಸ್ತುಗಳನ್ನು ಬಿಂಬಿಸುವ ರೀತಿ ಬೇರೆ. ಅದು ಪರಂಪರೆಯ ಮಾರ್ಗವನ್ನು ಬಿಟ್ಟು ಬಹು ದೂರ ಸರಿದಿರುವುದು. ಅವು ಅನ್ಯದೇಶೀಯ ರೂಪಗಳ ಅನುಕರಣೆಗಳು.

ಕವಿಗೆ ಆ ಸ್ವಾತಂತ್ರ್ಯವಿಲ್ಲವೆ? ಎಲ್ಲ ಕಲಾವಿದರೂ ಸ್ವತಂತ್ರರು. ಆ ಸ್ವಾತಂತ್ರ್ಯದ ಸಾರ್ಥಕತೆ-ಕವಿ, ಓದುಗರೊಳಗಿನ ಭಾವ ವಿನಿಮಯವನ್ನು ಪೂರ್ಣಗೊಳಿಸುವುದರ ಮೇಲೆ ಹೊಂದಿಕೊಂಡಿದೆ. ಆ ದೃಷ್ಟಿಯಿಂದ ಅವು ವಿಶೇಷ ಸಫಲವಾಗಿಲ್ಲ ಎಂದು ನನಗನಿಸುತ್ತದೆ. ಆ ದಾರಿ. 'ಭಾವ—ಆಸ್ಫೋಟನೆಯ' ದಾರಿ. ಬೇಂದ್ರೆಯವರ 'ತುತ್ತಿನ ಚೀಲ' ಅದೇ ಕೆಲಸ ಮಾಡಿದೆ. ಇನ್ನಷ್ಟು ಸಾರ್ಥಕವಾಗಿ ಮಾಡಿದೆ. 'ಈ ಆಸ್ಫೋಟನಾ ಮಾರ್ಗ' ಮಿದುವಾದ, ಪರಿಚಿತವಾದ, ಮನಃ ಪರಿವರ್ತನೆ, ಕಾಂತಾ ಸಮ್ಮಿತಿಗಳ ದಾರಿಯಲ್ಲ. ಈ ಮಾರ್ಗ ಯಶಸ್ವಿಯಾಗ ಬಾರದೆಂದಿಲ್ಲ. ಕವಿಯ ಆಂತರಿಕ ಶಕ್ತಿ ಕೃತಕವಾದರೆ, ಹೃದಯ ದುರ್ಬಲವಾಗಿದ್ದರೆ, ಎರವಲು ಆವೇಶ ತುಂಬಿಕೊಂಡದ್ದಾದರೆ, ಅನುಭವ ಪಕ್ವ ಮನಸ್ಸಿಲ್ಲದೆ ಹೋದರೆ—ಎಣಿಸಿದ ಆಸ್ಫೋಟವಾಗದೆ 'ಪುಸ್ಸೆ'ಂದು ದನಿಮಾಡಿ, ರಸದ ಬದಲು ಕಸ ಚೆಲ್ಲುತ್ತದೆ. ನವ್ಯ ಕವಿಗಳಿಗೆ ಅಂಥ ಶಕ್ತಿ ಬರಲಿ. ದೇಶೀಯ ರೂಪಗಳಿಂದ ಅವು ಬೆಳೆಯಲಿ. ಅವೂ ಸ್ವೀಕಾರಾರ್ಹವೇ.

ಇನ್ನು ಗದ್ಯದ ಹೊಸ ರೂಪಗಳ ವಿಚಾರವನ್ನು ತೆಗೆದುಕೊಳ್ಳಬಹುದು. ಇಲ್ಲಿ ನಮ್ಮ ಚಿತ್ರ—ನಾಟಕ, ಕಥೆ, ಕಾದಂಬರಿಗಳು.

ನಾಟಕವೂ ನಮ್ಮಲ್ಲಿ ಹಳೆಯ ರೂಪವನ್ನು ಹೊತ್ತು ಬಂದಿತು. ಷೇಕ್ಸ್‌ಪಿಯರಿನ ಬ್ಲೇಂಕ್ ವರ್ಸ್ ಶೈಲಿಯನ್ನನುಸರಿಸಿ ಶ್ರೀ ಪುಟ್ಟಪ್ಪನವರು ಸಾರ್ಥಕ ಪ್ರಯೋಗವನ್ನು ಮಾಡಿದ್ದನ್ನು ಕಾಣುತ್ತೇವೆ. ಆದರೆ ಅದರಲ್ಲಿ ಭಿನ್ನ, ಸ್ವಾತಂತ್ರ್ಯ ರೂಪಗಳು ಹುಟ್ಟಿಲ್ಲ.

ಶ್ರೀ ಕೈಲಾಸಂರು ವ್ಯಂಗ್ಯ, ಹಾಸ್ಯಗಳ ಸಹಾಯದಿಂದ

ಒಂದು ಬಗೆಯ ಹೊಸ ಶೈಲಿಗೆ ಕಾರಣರಾದರು. ಹಾಗೆಯೇ ಪಾಶ್ಚಾತ್ಯ ಏಕಾಂಕ ನಾಟಕಗಳ ರೂಪ ಹಲವರಿಂದ ಯಶಸ್ವಿಯಾಗಿ ಕನ್ನಡದಲ್ಲಿ ಪ್ರಯೋಗಗೊಂಡಿದೆ. ಅಲ್ಲಿನ ಕಾಲ, ಸ್ಥಳ, ಕಾರ್ಯಗಳ ಐಕ್ಯತೆಯ ವಿಧಾನವನ್ನು ನಾವು ತಂದಿರುವೆವಾದರೂ ಅವು ನಮಗೆ ಹೊಸತಲ್ಲ; ಭಾಸ, ಈ ಮಾದರಿಯನ್ನು ಶತಮಾನ, ಶತಮಾನಗಳ ಹಿಂದೆ ತೋರಿಸಿ ಕೊಟ್ಟಿದ್ದಾನೆ.

ನಾಟಕದಲ್ಲಿ ಗೀತ ನಾಟಕದ ರೀತಿ ಕನ್ನಡದ ಹೊಸ ಕಾಣಿಕೆ. ನರಸಿಂಹಾಚಾರ್ಯರು ಈ ದಾರಿಯಲ್ಲಿ 'ಅಹಲ್ಯಾ' ಮೊದಲಾದ ನಾಟಕ ಕೊಟ್ಟಿದ್ದಾರೆ.

ಇನ್ನು ಕಾದಂಬರಿಗಳ ಕಡೆಗೆ ತಿರುಗಿದಲ್ಲಿ ಹಳೆಗಾಲದ ಕಾದಂಬರಿ ರೂಪ ಇಂದು ಮಾಯವಾಗಿದೆ. ಬಂಕಿಮರ ದಾರಿ ಈಗ ಅನುಸರಣೆಯಲ್ಲಿ ಇಲ್ಲ. ಸಂದರ್ಭವಿದ್ದೂ ಇಲ್ಲದೆಯೂ ಅಷ್ಟಾದಶ ವರ್ಣನೆಯನ್ನು ಮಾಡುವ ಹೊಸ ಕವಿಗಳು ಹೇಗೆ ಕಾಣಿಸರೋ, ನಿಸರ್ಗದ ಬಣ್ಣನೆಯನ್ನು ಸ್ಥಾನವಿಲ್ಲದೆಯೂ ತುಂಬಿಸುವ ಬರಹಗಾರರು ಇಂದು ಕಡಿಮೆ.

ಇಂದಿನ ಗದ್ಯ ಸರಳವಾಗುತ್ತಾ ಬಂದಿದೆ. ಮಾತಿನ ಚುರುಕೂ, ಚೆಲುವೂ ಇಂದಿನ ಕಾದಂಬರಿಗಳಲ್ಲಿ ಹೆಚ್ಚುತ್ತಾ ಬಂದಿವೆ. ಕಾದಂಬರಿಯ ರೀತಿಯಲ್ಲಿ ಕತೆಗಾರ, ಕತೆಯ ಪಾತ್ರಗಳು ಎರಡು ಮುಖ್ಯ ಅಂಗಗಳು. ಕಥೆಯ ಪಾತ್ರಗಳು ತಾವಾಗಿಯೇ ನುಡಿಯುವ ಮಾತುಗಳು ಇಂದಿನ ಕಾದಂಬರಿಗಳಲ್ಲಿ ಬಹುವಾಗಿ ಬೆಳೆದು ಬಂದಿವೆ. ಕೆಲವೊಮ್ಮೆ ಇದು ನಾಟಕವೇ ಎಂಬ ಭ್ರಮೆಯೂ ಬಂದು ಬಿಡುತ್ತದೆ. ಕಾದಂಬರಿಯಲ್ಲಿ ಸಂಭಾಷಣೆಗೆ ಮಿತಿ, ಔಚಿತ್ಯವೇನು? ಪಾತ್ರಗಳ ಶೀಲ ವಿಸ್ತರಣೆಗೆ ಬಾರದ ಸಂಗತಿಗಳೆಲ್ಲ ಆ ಮಿತಿಯ ಹೊರಗೆ.

ಕಾದಂಬರಿಯ ಮುಖ್ಯ ಉದ್ದೇಶದ ತೂಕವನ್ನು ಕೆಡಿಸುವ ಸಂಭಾಷಣೆಯ ಗಾತ್ರ ಚೆಲುವುಗಳೆಲ್ಲ ಅದಕ್ಕೆ ಹೊರತು. ಈ ದೃಷ್ಟಿಯಿಂದ ಹೊಸ ಕಾದಂಬರಿಗಳಿಗೆ ಬಂದಿರುವ ನಾಟಕ ರೂಪ ಹಾನಿಗೆ ಕಾರಣವಾಗಿದೆ.

ಅದರ ಇನ್ನೊಂದು ಅಂಗ 'ಕತೆಗಾರ' ಎಂದೆ. ಪಾತ್ರಗಳ ರೂಪ, ಮನೋಧರ್ಮ, ಕಾಲಕಾಲದ ಚಲನವಲನ ಕ್ರಿಯೆ, ಆವರಣಗಳನ್ನು ಆತ ಹೇಳಬೇಕಾಗುತ್ತದೆ. ಅದರಲ್ಲಿ ಪರತನದ ನೋಟ (objective outlook) ಪ್ರಧಾನವಾಗಿರಬೇಕು. ಕತೆಗಾರನ ವ್ಯಕ್ತಿ ಉದ್ಗಾರಗಳು ಕಲಾ ಸೃಷ್ಟಿಗೆ ಮಾರಕವಾಗಿವೆ. ತನ್ನ ಮನೋಧರ್ಮದ ದೃಷ್ಟಿಯಿಂದ ಪಾತ್ರಗಳ, ಆದರ್ಶಗಳ, ಕ್ರಿಯೆಗಳ ನಡವಳಿಕೆಯನ್ನು ತೋರಿಸುವ ರೀತಿ, ಕತೆಗಾರನೇ ವಕೀಲನಂತೆ ಆರೋಪಿಯ ಬಗ್ಗೆಯಾಗಲೀ ನಾಯಕನ ಬಗ್ಗೆಯಾಗಲೀ ನಡೆಸುವ ಚರ್ಚೆ ಉತ್ತಮ ರೂಪವಲ್ಲ.

ಪಾತ್ರಗಳ ಬೆಳವಣಿಗೆ, ವಿಸ್ತರಣ, ಚಿತ್ರಣ ಸನ್ನಿವೇಶಗಳಿಂದ ನಾವು ತನ್ನಂತೆಯೇ "ಅವರ ಮನಸ್ಸು ಇದರಿಂದ ಹೀಗಾಯಿತೊ" ಎಂದು ಅನುತಪಿಸುವಂತಾಗಬೇಕೇ ಹೊರತು ಸ್ವಸಹಾಯಕ್ಕೆ ಉದಾಹರಣೆಯಾಗಿ "ಕಾಗೆಯೂ ಹೂಜಿಯೂ" ಕತೆ ಹೇಳಿದಂತಾಗಬಾರದು.

ಕಾದಂಬರಿಗಳೂ ಕತೆಗಳೂ ಇಂದು ವಿಪುಲವಾಗಿ ಕನ್ನಡದಲ್ಲಿ ಬೆಳೆದಿವೆಯಾದರೂ ಅಂಥ ವಿಶೇಷವಾದ ಹೊಸತನ, ಹೊಸ ವಿಧಾನಗಳು ಇವೇ ನನಗೆ ಕಾಣಿಸವು. ಕೃತಕ ಅನುರಕ್ತಿಯನ್ನು ಹೊಸತನವೆನ್ನದಲ್ಲಿ, ಹೊಸ ಅನುರಕ್ತಿಗಳು ಕೂಡಾ ಕಾಣಿಸಿಲ್ಲ. ಕಾದಂಬರಿಯ ಬೃಹದ್ವಿಸ್ತಾರವನ್ನು ತುಂಬಿಸಲು—ನಮ್ಮಲ್ಲಿಯೇ ಎಷ್ಟು ಹೊಸತನವಿದೆ? ನೋಟದಲ್ಲೇ?—ಅನುಭವದಲ್ಲೇ? ಬಾಳಿನಲ್ಲೇ? ನಾವು ಇದಿರಿಸುತ್ತಿರುವ ಸಂಘರ್ಷಣೆಯಲ್ಲೇ?

ಆದರೆ ಇಂದಿನ ನಾಲ್ಕು ಮಂದಿ ನಾವುಗಳೇ ಪೂರ್ಣ, ಗದ್ಯವೂ ಅಲ್ಲ ಪದ್ಯವೂ ಅಲ್ಲ, ಬಾಳೂ ಅಲ್ಲ. ಬಾಳಿನ ಅವಿರತ ಪ್ರವಾಹದ ತುಂತುರುಗಳು ನಾವು. ಕನ್ನಡ ಬಾಳಿನ ಪ್ರವಾಹ ಬೆಳೆಬೆಳೆದು ಇನ್ನೆಷ್ಟೋ ಹೊಸ ಸಂಪತ್ತು ಸೌಂದರ್ಯಗಳನ್ನು, ರೂಪ ವಿಶೇಷಗಳನ್ನು ಪ್ರಕಟಿಸಬಾರದೆಂದಿಲ್ಲವಷ್ಟೆ. ಅಂತಹ ದಿನ ಬರಲಿ. ನಮ್ಮ ಬಾಳು ವೈವಿಧ್ಯ ಪೂರ್ಣವಾಗಲಿ.

ಸಾಹಿತ್ಯದಲ್ಲಿ ವಾಸ್ತವಿಕತೆ

ಅ. ನ. ಕೃಷ್ಣರಾಯ

ನಾಲ್ಕು ದಶಕಗಳ ಹಿಂದೆ ಕನ್ನಡ ಸಾಹಿತ್ಯದ ನವೋದಯ ವಾಯಿತು. ಈ ಕಾಲಾವಧಿಯಲ್ಲಿ ಕನ್ನಡ ಸಾಹಿತ್ಯ ವಿವಿಧ ರೂಪ, ಅಲಂಕಾರ, ಭಾವ, ಪ್ರಭಾವಗಳನ್ನು ಪ್ರದರ್ಶಿಸಿದೆ. ೧೯೧೫ ರಲ್ಲಿ ಪ್ರಕಟವಾದ ಎಂ.ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯನ್ನು ನವೋದಯಕಾಲದ ಆದಿ ಗ್ರಂಥವನ್ನಾಗಿ ನಾವು ಪರಿಗ್ರಹಿಸಬಹುದಾದರೂ ಅದು ಸಮ ಕಾಲೀನ ಸಾಹಿತ್ಯದಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡ ಲಿಲ್ಲ. ನವೋದಯದ ಆರಂಭದ ದೆಸೆಯಲ್ಲಿ ಸಣ್ಣಕಥೆಗಳು, ಭಾವಗೀತೆಗಳು ಜನತೆಯ ಮನಸ್ಸಿನ ಮೇಲೆ ಪ್ರಭಾವ ಮೂಡಿಸಿ ದವು; ಕೈಲಾಸಂ ಅವರ ಅದ್ವಿತೀಯ ಪ್ರತಿಭೆ ಕನ್ನಡ ನಾಟಕಕ್ಕೆ ವಿಶಿಷ್ಟಸ್ಥಾನ ಕಲ್ಪಿಸಿಕೊಟ್ಟಿತು.

ನವೋದಯದ ಆರಂಭಕಾಲದಲ್ಲಿ ಸಾಹಿತ್ಯವನ್ನು ಜನ ಪದಕ್ಕೆ ಸಮೀಪಗತ ಮಾಡಬೇಕೆಂಬ ಲವಲವಿಕೆ ಮೂಡಿತು. ಪಂಡಿತರು, ವಿವಿಧ ಕಳಾಮಂಡಿತರು ಮಾತ್ರವಲ್ಲದೆ ಸಾಮಾನ್ಯ ಜನರೂ ಸಾಹಿತ್ಯವನ್ನು ಅನುಭವಿಸಲು ಸಾಧ್ಯ—ಅದರಿಂದ ಆನಂದ, ಸ್ಫೂರ್ತಿ, ಶಾಂತಿ ದೊರಕಿಸಿಕೊಳ್ಳಬಹುದೆಂಬ ಭಾವನೆ ಮೂಡಲು ನವೋದಯಕಾಲದ ಸಾಹಿತಿಗಳು ಶ್ರಮಿಸಿದರು. ಆದರೆ ಈ ಕಾಲದ ಸಾಹಿತಿಗಳ ಅಸ್ವತಂತ್ರ ಮನೋಭಾವ, ದೇಶದ ದಾಸ್ಯಸ್ಥಿತಿ. ಸಾಹಿತ್ಯದ ಬಹುಮುಖವ್ಯಾಪ್ತಿಗೂ, ಆಳ ವಾದ ಸಮಸ್ಯೆಗಳ ಪೃಥಕ್ಕರಣಕ್ಕೂ ಅಡ್ಡಿಯನ್ನೊದಗಿಸಿದವು. ಸಾಹಿತ್ಯ ವಿಹಾರ ಸಾಧನ ಹೌದು—ಆದರೆ ಕೇವಲ ವಿಹಾರ

ಸಾಧನವಲ್ಲ. ವಿಚಾರ, ವಿಕಾಸಗಳ ಮೂಲಕ ಸಾಧ್ಯವಾಗುವ ನಿರ್ವಿಕಾರ, ನಿಶ್ಚಲ, ನಿರ್ಮಲ ಆನಂದವೇ ಸಾಹಿತ್ಯದ ಗುರಿ ಯೆಂದು ಒಪ್ಪಿಕೊಂಡರೆ ಆ ಕಾಲದ ಸಾಹಿತ್ಯ ನಮ್ಮ ಹಾಗೂ ನಮ್ಮ ದೇಶದ ಆವಶ್ಯಕತೆಯನ್ನು ಪೂರೈಸಲಿಲ್ಲ. ಹಲವಾರು ಉಪಹತಿಗಳಿಂದ ಬಾಧಿತರಾಗಿದ್ದ ಸಾಹಿತಿಗಳು ಧೀರಸಾಹಿತ್ಯ ವನ್ನು ನಿರ್ಮಿಸಲು ಹಿಂಜರಿದರು. ಈ ಕಾರಣಕ್ಕಾಗಿ ನವೋದಯ ಕಾಲದ ಸಾಹಿತ್ಯ ತ್ಯಾಜ್ಯವಾಗುವುದಿಲ್ಲ. ಒಂದು ರಾಷ್ಟ್ರದ ಸಾಹಿತ್ಯ ಸೌಧ ಪೂರ್ಣವಾಗಬೇಕಾದರೆ ಈ ಬಗೆಯ ಸಾಧನೆ ದುಡಿಮೆ ಆಗಲೇಬೇಕು–ವಿಚಾರ ಉಚ್ಚಾರಗಳನ್ನು ರೂಪಿಸುವ ಹೊಣೆಗಾರಿಕೆಯನ್ನು ಕೆಲವರು ಹೊರಲೇಬೇಕು. ಈ ಕಾಲದ ಸಾಹಿತ್ಯ ಕೃತಿಗಳು ಪರಿಪೂರ್ಣವಲ್ಲದಿದ್ದರೂ ಅವು ವ್ಯಷ್ಟಿಸಮಷ್ಟಿ ಗಳ ಅಗತ್ಯವನ್ನು ಅನುಲಕ್ಷಿಸಿದವು.

ಸಣ್ಣ ಕಥೆ, ಭಾವ ಗೀತೆಗಳ ಸ್ವರೂಪ ವಿಶಾಲ ಜೀವನ ಚಿತ್ರಣಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಒಂದು ಭಾವ, ಅನುಭವ, ದೃಶ್ಯವನ್ನಷ್ಟೇ ಸಣ್ಣಕಥೆ, ಭಾವಗೀತೆ ಚಿತ್ರಿಸಬಲ್ಲವು. ವ್ಯಾಪಕ ಜೀವನವನ್ನು ಚಿತ್ರಿಸುವುದಕ್ಕೆ ಹೆಚ್ಚಿನ ಬಾಹುಳ್ಯವುಳ್ಳ ಕ್ಷೇತ್ರವೇ ಬೇಕು. ಆ ಕ್ಷೇತ್ರವನ್ನು ಎಂ. ಎಸ್. ಪುಟ್ಟಣ್ಣನವರೂ, ಕೆರೂರು ವಾಸುದೇವಾಚಾರ್ಯರೂ ಸೃಷ್ಟಿಸಿದ್ದರೂ ಅದು ಕೆಲ ಕಾಲ ಬೆಳೆಯಲಿಲ್ಲ. ಪುಟ್ಟಣ್ಣನವರೂ ವಾಸುದೇವಾಚಾರ್ಯರೂ ಒಂದು ಸಮಾಜದ ಜೀವನವನ್ನು ಹೊರಗಣ್ಣಿನಿಂದ ನೋಡಿ ಅದರ ಅಂದ ಚೆಂದಗಳನ್ನು ಕಿಲ್ಬಿಷ ಕಾಳಿಕೆಗಳನ್ನು ಬಿಡಿಸಿ ತೋರಿಸಿದರು. ಅವರ ಸೇವಾ ಕ್ಷೇತ್ರದೊಳಗೆ ಬರದಿರುವ ಹಲ ವಾರು ಸಮಾಜಗಳು, ಹಲವಾರು ಅನುಭವಗಳು ದಕ್ಷ ಕಾದಂ ಬರಿಕಾರರ ದಾರಿ ನೋಡುತ್ತಿದ್ದವು.

೧೯೩೫ರ ವೇಳೆಗೆ ಸಣ್ಣ ಕಥೆ, ಭಾವಗೀತೆಗಳ ಯುಗ ಮುಗಿದು ಕಾದಂಬರಿಯುಗ ಆರಂಭವಾಯಿತು. ಸಾವಕಾಶವಾಗಿ ನಾಲ್ಕಾರು ಗಂಟೆ ಓದಿಸಿಕೊಳ್ಳುವ ಕೃತಿಗಳನ್ನು ಓದಗರು ಬಯಸಿದುದೂ ಇದಕ್ಕೆ ಇಂಬುಗೊಟ್ಟಿತು. ೧೯೩೫ ರಿಂದ ೧೯೪೭ರವರೆಗೆ ಹನ್ನೆರಡು ವರ್ಷಗಳು ಕನ್ನಡದಲ್ಲಿ ಕಾದಂಬರಿ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ರೂಪುಗೊಂಡಿತು. ಕನ್ನಡ ನಾಡಿನ ಹೊರಗೂ ಮಾನ್ಯತೆ ದೊರಕಿಸಿಕೊಂಡ 'ಸಂಧ್ಯಾರಾಗ', 'ಮರಳಿ ಮಣ್ಣಿಗೆ', 'ಕಾನೂರು ಸುಬ್ಬಮ್ಮ ಹೆಗ್ಗಡಿತಿ'- ಪ್ರಕಟವಾದುದು ಈ ಕಾಲದಲ್ಲಿಯೇ.

ಕನ್ನಡ ಕಾದಂಬರಿ ಪ್ರಪಂಚದ ನಾಲ್ಕು ಘಟ್ಟಗಳನ್ನು ನಾವಿಂತು ನಿರ್ದೇಶಿಸಬಹುದು :

೧) ೧೯೧೫: ಆರಂಭಕಾಲ: 'ಮಾಡಿದ್ದುಣ್ಣೋ ಮಹಾರಾಯ', 'ಇಂದಿರಾ' ಕೃತಿಗಳು.

೨) ೧೯೩೫—೧೯೪೭ : ಮಧ್ಯಕಾಲ: 'ಸಂಧ್ಯಾರಾಗ', 'ಮರಳಿ ಮಣ್ಣಿಗೆ', 'ಕಾನೂರು ಸುಬ್ಬಮ್ಮ ಹೆಗ್ಗಡಿತಿ'.

೩) ೧೯೪೭—೧೯೫೩ : ಪ್ರಯೋಗಕಾಲ.

೪) ೧೯೫೩—೧೯೫೪ : ಸಮಕಾಲೀನ.

ಆರಂಭಕಾಲದ ಕೃತಿಗಳು ಸಂಖ್ಯಾ ಪ್ರಮಾಣದಲ್ಲಿ ಬೆಳೆಯಲಿಲ್ಲ. ಬಿ. ವೆಂಕಟಾಚಾರ್ಯರೂ, ಗಳಗನಾಥರೂ, ಉಡುಪಿಯ ಗೆಳೆಯರೂ ಬಂಗಾಳಿ, ಮರಾಠಿ ಅನುವಾದಗಳಿಗೇ ಮನಸ್ಸು ತೆತ್ತರು. ಸ್ವತಂತ್ರ ಕಾದಂಬರಿಕಾರರಾದ ಪುಟ್ಟಣ್ಣನವರೂ, ವಾಸುದೇವಾಚಾರ್ಯರೂ ಮಧ್ಯಮವರ್ಗದ ಸಂಪ್ರದಾಯ ಬದ್ಧ ಜೀವನವನ್ನೇ ಚಿತ್ರಿಸಿದರು.

ಮಧ್ಯಕಾಲದ ಕೃತಿಗಳು ಸಂಖ್ಯಾ ಪ್ರಮಾಣದಲ್ಲಿ ಬೆಳೆದುವಲ್ಲದೆ, ಅವುಗಳ ವಸ್ತುಗಳು ಹೆಚ್ಚಿನ ವೈವಿಧ್ಯ, ಜೀವನದ ಸೂಕ್ಷ್ಮ ವಿಮರ್ಶೆಗಳನ್ನು ಪ್ರದರ್ಶಿಸಿದವು. ಶ್ರೀಮಂತ, ಮಧ್ಯಮ, ಸಾಮಾನ್ಯ ವರ್ಗದ ಜೀವನದ ವಿವಿಧ ಸಮಸ್ಯೆಗಳನ್ನೂ ಈ ಕಾಲದ ಕಾದಂಬರಿಗಳು ಅನುಲಕ್ಷಿಸಿದವು.

ಪ್ರಯೋಗಕಾಲದ ಕೃತಿಗಳು ರಾಜಕೀಯ ಜೀವನವನ್ನು ಕಾದಂಬರಿಯ ಎಲ್ಲೆಯೊಳಗೆ ತಂದುಕೊಂಡುದಲ್ಲದೆ ವಿವಾದಾಸ್ಪದವಾದ ಹಲವು ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ವಿಮರ್ಶಿಸಿತು. ವೇಶ್ಯಾಸಮಸ್ಯೆ, ಸಂತತಿ ಪ್ರತಿಬಂಧನ, ಸ್ತ್ರೀಸ್ವಾತಂತ್ರ್ಯ, ದೇಶಾಭಿಮಾನದ ಇತಿಮಿತಿಗಳನ್ನು ಈ ಕಾಲದ ಕಾದಂಬರಿಗಳು ದಿಟ್ಟತನದಿಂದ ಎದುರಿಸಿದವು.

ಸಮ ಕಾಲೀನ ಕಾದಂಬರಿ ಸಾಹಿತ್ಯವನ್ನು ನಾವು 'ಜನಪ್ರಿಯ ಸಾಹಿತ್ಯಯುಗ' ವೆಂದು ಕರೆಯಬಹುದು. ಹೊಸ ಹೊಸ ಲೇಖಕರು ಹುಟ್ಟಿಕೊಂಡುದಲ್ಲದೆ ಕಾದಂಬರಿ ವಿರಾಟ್ ಸ್ವರೂಪ ತಳೆದು ನಿಂತಿತು. ಜನತೆಯ ಆರ್ಥಿಕಾನುಕೂಲಕ್ಕನುಗುಣವಾಗಿ ಕಾದಂಬರಿ ಒದಗಿಸುವ ಪ್ರಯತ್ನ 'ವಾಹಿನಿ ಪ್ರಕಾಶನ' ದವರಿಂದ ಆರಂಭವಾಗಿ, ಇತರರಿಂದ ಅನುಸರಿಸಲ್ಪಟ್ಟು, ಹಳ್ಳಿ ಹಳ್ಳಿಗಳಿಗೆ, ಮನೆ ಮನೆಗಳಿಗೆ, ಸಾಹಿತ್ಯ ಮುಟ್ಟುವಂತಾಯಿತು. ಅಸಂಖ್ಯಾತವಾಗಿ ಕಾದಂಬರಿ ಈಗ ಪ್ರಕಟವಾಗುತ್ತಿರುವಾಗ ಗುಣದ ಕಡೆ ಇರಬೇಕಾದ ಲಕ್ಷ್ಯ ಕಡಿಮೆಯಾಗಿದೆಯೆನ್ನುವುದರಲ್ಲಿ ಸಂದೇಹವಿಲ್ಲ. ಸಾಮಾನ್ಯ ವ್ಯಾಕರಣ, ವಾಕ್ಯರಚನೆ, ಕಥಾಸೃಷ್ಟಿ, ಸಂವಿಧಾನ ಕಲ್ಪನೆಗಳ ಜ್ಞಾನವಿಲ್ಲದವರೂ ಕಾದಂಬರಿ ರಚನೆಗೆ ಕೈ ಹಾಕುತ್ತಿದ್ದಾರೆ. ಅಂದಚಂದಕ್ಕೆ ಬೆರಗಾದ ಓದುಗರು ಕಾದಂಬರಿ ಓದಿ ಬೇಸರ

ಗೊಳ್ಳುವುದು ಅನಿವಾರ್ಯವಾಗುತ್ತಿದೆ. ಈ ಅಮಿತಸೃಷ್ಟಿ ಶಾಶ್ವತವಾಗಿ ಉಳಿಯುವ ಸಂಭವವಿಲ್ಲ. ಓದುಗರು ಎಚ್ಚರ ಗೊಂಡಂತೆ ಕಾದಂಬರಿಕಾರರೂ ಹೆಚ್ಚಿನ ದಕ್ಷತೆ, ಸಾರ್ಥಕತೆ ಯನ್ನು ತೋರಿಸಬೇಕಾಗುವುದು.

ಈ ನಾಲ್ಕು ದಶಕಗಳು ಕನ್ನಡ ಕಾದಂಬರಿ ಬೆಳೆದಿರುವ ಬಗೆಯನ್ನು ನಾವು ಗಮನಿಸಿದರೆ ಕನ್ನಡದ ಈ ಸಾಹಿತ್ಯ ಪ್ರಕಾರ ಅನ್ಯಾದೃಶವಾಗಿ ಬೆಳೆದಿದೆಯೆಂದು ನಾವು ಹೆಮ್ಮೆ ಪಡಬೇಕು. ಭಾರತದ ಇತರ ಭಾಷೆಗಳಲ್ಲಿ ನಿರ್ಮಾಣವಾಗು ತ್ತಿರುವ ಕಾದಂಬರಿಗಳಿಗಿಂತ ಕನ್ನಡ ಕಾದಂಬರಿಗಳು ಉತ್ಕೃಷ್ಟ ವಾಗಿರುವವಲ್ಲದೆ ರಷ್ಯಾ, ಅಮೇರಿಕಾ, ಫ್ರಾನ್ಸ್, ಇಂಗ್ಲೆಂಡ್ ದೇಶಗಳ ಕಾದಂಬರಿಗಳೊಂದಿಗೆ ಧೈರ್ಯವಾಗಿ ಸ್ಪರ್ಧಿಸಲು ಸಿದ್ಧವಾಗಿವೆ.

ಹಿಂದಿನ ಮೂರು ದಶಕಗಳ ಕಾದಂಬರಿಕಾರರಿಗಿಂತಲೂ ಸಮಕಾಲೀನ ಕಾದಂಬರಿಕಾರ ಹೆಚ್ಚಿನ ಸ್ವಾತಂತ್ರ್ಯ ವೃತ್ತಿ ತಳೆ ದಿದ್ದಾನೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ತಂತ್ರ ದೃಷ್ಟಿ ಯಿಂದಲೂ ಅವನು ಹಿಂದಿನ ಪೀಳಿಗೆಯವರನ್ನು ಮೀರಿಸಿದ್ದಾನೆ. ಕಾದಂಬರಿಯನ್ನು ಜನತಾ ಶಿಕ್ಷಣದ ಪ್ರಬಲಾಯುಧವನ್ನಾಗಿ ಮಾಡಿ, ಅದು ರಾಷ್ಟ್ರ ಜೀವನದ ಮುಖ್ಯಾಂಗವಾಗುವಂತೆ ಮಾಡುವ ಪ್ರಯತ್ನ ಸತತವಾಗಿ ನಡೆದಿದೆ.

ಆಧುನಿಕ ಕಾದಂಬರಿಕಾರರ ಮುಂದೆ ಬೃಹತ್ಸಮಸ್ಯೆಗಳು ತಲೆಯೆತ್ತಿ ನಿಂತಿವೆ. ಕಲ್ಪನಾ ವಿಲಾಸಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕಾದಂಬರಿಕಾರ ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಇದ್ದ ಮನೋಭಾವ ೧೯೫೯

ರಲ್ಲಿ ಇದೆಯೆಂದು ಭಾವಿಸಲು ಸಾಧ್ಯವಿಲ್ಲ. ಸ್ವಾತಂತ್ರ್ಯದಿಂದ ವೈಯಕ್ತಿಕ ಲಾಭವಾಗಲಿಲ್ಲವೆಂದು ಭಾವಿಸುವವರೂ, ಅಸ್ವತಂತ್ರ ಜೀವನದಲ್ಲಿಯೇ ಹೆಚ್ಚಿನ ಸುಖವಿತ್ತೆಂದು ಭಾವಿಸುವವರೂ ಬೆಳೆದಿದ್ದಾರೆ. ನಮ್ಮ ಸ್ವಾತಂತ್ರ್ಯ ಜೀವನ ರೂಪುಗೊಳ್ಳುವ ಮುನ್ನವೇ ರಷ್ಯಾ, ಅಮೇರಿಕಾ ರಾಷ್ಟ್ರಗಳ ರಾಜಕೀಯ ಗಾಳಿ ಬೀಸತೊಡಗಿದೆ. ರಾಜಕೀಯ ಜೀವನದಲ್ಲಿ ಕಂಡು ಬರುತ್ತಿರುವ ಅಶಾಂತಿ, ಅತೃಪ್ತಿ, ಅವ್ಯವಸ್ಥೆಗಳೇ ಸಾಮಾಜಿಕ ಜೀವನದಲ್ಲಿಯೂ ಪ್ರತಿಬಿಂಬಿಸಿವೆ. ವರ್ಣಾಶ್ರಮ ಧರ್ಮ, ಹರಿಜನರ ಸಮಸ್ಯೆ, ಸ್ತ್ರೀ ಸ್ವಾತಂತ್ರ್ಯ, ಶಿಕ್ಷಣ ಇವುಗಳ ಬಗ್ಗೆ ನಾವು ತಳೆಯಬೇಕಾದ ಧೋರಣೆ ಯಾವುದು ಎನ್ನುವ ವಿಷಯ ಇನ್ನೂ ಇತ್ಯರ್ಥವಾಗಿಲ್ಲ.

ಸಾಹಿತ್ಯಕೃತಿ ಜೀವನದ ಪ್ರತಿಬಿಂಬವಾಗಿರಬೇಕು. ಜೀವನದ ಮುಖಕ್ಕೆ ಕನ್ನಡಿ ಹಿಡಿಯಬೇಕು ಎನ್ನುವ ಸಿದ್ಧಾಂತದಿಂದ ಇಂದಿನ ಸಾಹಿತ್ಯ ಸ್ವಲ್ಪ ಮುಂದೆ ಹೋಗಿದೆ. ಜೀವನದ 'ಮಕ್ಕೀಕಾಮಕ್ಕಿ' ಕಾಪಿ ಕಲಾಕೃತಿಯಾಗುವುದಿಲ್ಲ. ನಿಸರ್ಗ ನೋಟಗಳನ್ನು ಚಿತ್ರಿಸುವ ಚಿತ್ರಗಾರ ತನ್ನ ಕಲ್ಪನೆಯ ಸಾಮರಸ್ಯಕ್ಕಳವಡುವಂತೆ ಜೀವಂತ ಪ್ರಕೃತಿಯನ್ನೇ ಅಸ್ತವ್ಯಸ್ತಗೊಳಿಸುವಂತೆ ಕಾದಂಬರಿಕಾರನೂ ಜೀವನವನ್ನು ತನ್ನ ಕಲಾಕೃತಿಗೆ ಮಾರ್ಪಡಿಸಿಕೊಳ್ಳುತ್ತಾನೆ. ತನ್ನ 'ಕಚ್ಚಾಮಾಲ'ನ್ನು ಜೀವನದಿಂದಲೇ ಆವನೆತ್ತಿಕೊಂಡರೂ ಅದಕ್ಕೆ ಒಪ್ಪ ಓರಣವಿಟ್ಟು, ತನ್ನ ವಿಚಾರದ ಮೂಸೆಯಲ್ಲಿ ಕುಂದಣವಿಟ್ಟು ಸಿದ್ಧ ಕೃತಿಯಾಗಿಸುತ್ತಾನೆ.

ಇಂದು ಕನ್ನಡಿಗರು ಕಾದಂಬರಿಯಲ್ಲಿ ಸಾಧಿಸಿರುವುದು ಗಣನೀಯವಾದುದಾದರೂ ಅವರು ತೃಪ್ತರಾಗಿ ಕೂಡಲು ಸಾಧ್ಯ

ವಿಲ್ಲ. ವಿಶ್ವಜೀವನಕ್ಕೆ ಭಾರತ ತನ್ನ ಅಮರ ಸಂಸ್ಕೃತಿಯಿಂದ ಮಹೋನ್ನತ ಸೇವೆಯನ್ನೆಸಗಬೇಕಾಗಿರುವ ಈ ಪರ್ವಕಾಲದಲ್ಲಿ ಕಾದಂಬರಿಕಾರನೂ ತನ್ನ 'ಅಳಿಲಸೇವೆ' ಯನ್ನರ್ಪಿಸಬೇಕಾಗಿದೆ.

ಪರರಾಷ್ಟ್ರಗಳನ್ನು ಅನುಕರಿಸದ, ಅವರ ಸಾಮಾಜಿಕ, ರಾಜಕೀಯ ಜೀವನಕ್ಕೆ ಮುಗಿಬೀಳದ ರಾಷ್ಟ್ರಜೀವನವನ್ನು ನಾವು ಕಟ್ಟಬೇಕು. ಭಾರತ ಜೀವನ, ಸಾಹಿತ್ಯ, ಸಂಸ್ಕೃತಿ ಭಾರತದ್ದಾಗಿರಬೇಕಲ್ಲದೆ ಇಂಗ್ಲೆಂಡ್, ಫ್ರಾನ್ಸ್, ರಷ್ಯಾ, ಅಮೇರಿಕಾಗಳ ಪ್ರತಿಧ್ವನಿಯಾಗಿರಬಾರದು. ಈ ಗುರಿ ಸಾಧಿಸಲು ಜನಪದ ಸಚಿವನೂ, ಗೆಳೆಯನೂ, ಪ್ರಿಯಬಂಧುವೂ, ಗುರುವೂ ಆಗಿರುವ ಕಾದಂಬರಿಕಾರ ಸಮರ್ಥನಾಗಿದ್ದಾನೆ.—ಆದ್ದರಿಂದಲೇ ಅವನ ಉತ್ತರವಾದಿತನವೂ ಹೆಚ್ಚುತ್ತದೆ.

ನವ್ಯ ಸಾಹಿತ್ಯದಲ್ಲಿ ನೀರೋಗ ವಿಮರ್ಶೆ

ಮಾಸ್ತಿ ವೆಂಕಟೇಶಅಯ್ಯಂಗಾರ್

ಕಲೆ ಎನ್ನುವುದು ಆರಂಭವಾದ ಹೊತ್ತಿನಲ್ಲೆ ಅದನ್ನು ಸವಿದ ರಸಿಕತೆಯೂ ಅದರ ಒಂದು ವಿಮರ್ಶೆಯೂ ಆರಂಭವಾದುವು. ಮೊದಲು ಎಂದೋ ಒಬ್ಬ ಅಥವಾ ಒಬ್ಬಳು ದನಿಯೆತ್ತಿ ಹಾಡಿದ ದಿನ ಯಾರೋ ಅದನ್ನು ಕೇಳಿದವರು ಅದು ಚೆನ್ನಾಗಿದೆಯೆಂತಲೋ ಚೆನ್ನಾಗಿಲ್ಲ ಎಂತಲೋ ಹೇಳಿರಲೇಬೇಕು: ಆ ಹಾಡಿದ್ದು ಕಲೆ; ಕೇಳಿದ್ದು ರಸಿಕತೆ; ಆ ಚೆನ್ನ ಅಥವಾ ಅಲ್ಲ ಎಂದದ್ದು ವಿಮರ್ಶೆ. ಕಲೆ ಬೆಳೆದ ಹಾಗೆ ವಿಮರ್ಶೆಯೂ ಬೆಳೆದು ಬಂದಿದೆ. ಸಂಸ್ಕೃತ ಸಾಹಿತ್ಯದಲ್ಲಿ ಕಾವ್ಯದ ಸ್ವರೂಪ, ರಸ, ರೀತಿ ಇತ್ಯಾದಿ ವಿಷಯಗಳನ್ನು ಕುರಿತ ವಿವರವಾದ ಪರಿಶೀಲನವೊಂದು ಪದ್ಧತಿಯಾಗಿ ಬೆಳೆಯಿತು. ಆದರೆ ಕವಿಗಳನ್ನು ಕುರಿತ, ಗ್ರಂಥಗಳನ್ನು ಕುರಿತ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಲೇಖನಗಳ ರೀತಿಯ ಲೇಖನ ನಮ್ಮಲ್ಲಿ ನಿರ್ಮಾಣವಾಗಲಿಲ್ಲ. ನಮ್ಮ ಹೊಸ ಸಾಹಿತ್ಯ ಪಾಶ್ಚಾತ್ಯ ಸಾಹಿತ್ಯದಿಂದ ಸ್ಫೂರ್ತಿ ಪಡೆದಿರುವ ಕಾರಣ ನಮ್ಮಲ್ಲಿ ಈಗ ಪ್ರತ್ಯೇಕ ಗ್ರಂಥಗಳ ಪರಿಶೀಲನ, ಲೇಖಕರನ್ನು ಕುರಿತ ಸಮೀಕ್ಷೆ ವಾಡಿಕೆಗೆ ಬರುತ್ತಿದೆ. ಇಂಥ ಬರವಣಿಗೆ ಸಾಹಿತ್ಯ ಕ್ಷೇತ್ರದಲ್ಲಿ ಮಾಡಬೇಕಾದ ಕೆಲಸ ಬಹಳ ಇದೆ. ಆದಕಾರಣ ಈ ವಿಮರ್ಶೆಯನ್ನೇ ಸರಿಯಾದ ದಾರಿಯಲ್ಲಿ ನಡಸುವ ವಿಮರ್ಶೆಯೊಂದು ನಮಗೆ ಈಗ ಬೇಕಾಗಿದೆ. ವಿಮರ್ಶೆ ತಪ್ಪುದಾರಿಗೆ ಹೋಗದಂತೆ ನೋಡಿಕೊಳ್ಳುವುದು ಎಲ್ಲ ಸಾಹಿತ್ಯದಲ್ಲಿಯೂ ಒಂದು ದೊಡ್ಡ

ಕೆಲಸ ಆಗಿದ್ದಿದೆ. ಆಂಗ್ಲ ಸಾಹಿತ್ಯದಲ್ಲಿ ಸಾಹಿತ್ಯ ನಿರ್ಮಾಣ ವಿಮರ್ಶೆ, ತಕ್ಕಷ್ಟು ಕಾಲ ನಡೆದ ಮೇಲೆ ವಿಮರ್ಶೆಯ ಗುಣಾವಗುಣಗಳನ್ನು ಕುರಿತ್ತ ಚರ್ಚೆ ಒಂದು ಆವಶ್ಯಕವಾದ ಸಂದರ್ಭದಲ್ಲಿ ಪೋಪ್‌ಕವಿ "ವಿಮರ್ಶೆಯನ್ನು ಕುರಿತ ಪ್ರಸಂಗ" ಎಂಬ ಒಂದು ವಿಸ್ತಾರವಾದ ಕವಿತೆಯನ್ನೇ ಬರೆದನು. ಅವರ ಮಾತು, ಈಗ, ಇಲ್ಲಿ, ಎಷ್ಟು ಚೆನ್ನಾಗಿ ಅನ್ವಯಿಸುತ್ತದೆ ಎಂಬುದನ್ನು ನೋಡಿದರೆ, ಕಾಲ ಬೇರೆ, ದೇಶ ಬೇರೆ, ಎನ್ನುವುದರಿಂದ ವಿಮರ್ಶೆಯ ಕೆಲಸ ಬೇರೆಯಾಗುವುದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಒಂದು ಉತ್ತಮ ಕಾವ್ಯವನ್ನು ನೋಡಿ ಕಾವ್ಯ ಹೀಗಿರಬೇಕೆಂದು ಕಲಿತು ವಿಮರ್ಶಕ ಇನ್ನೊಂದು ಉತ್ತಮ ಕಾವ್ಯ ಬೇರೆಯ ರೀತಿಯದಾದ ಕಾರಣದಿಂದ ಅದು ಚೆನ್ನಾಗಿಲ್ಲ ಎಂದು ಹೇಳುವ ಸಂಭವ ಬಹಳ. ಸಾಲದ್ದಕ್ಕೆ ವಿಮರ್ಶಕ ತನ್ನ ಕಲ್ಪನೆಗೆ ಅನುಸಾರವಾದ ಕೃತಿಯನ್ನು ಒಪ್ಪುವುದು, ಹಾಗಲ್ಲದ್ದನ್ನು ತೆಗಳುವುದು ತೀರ ಸಂಭವನೀಯ. ತಾನು ಬಹುಬಲ್ಲವನೆಂದು ತಿಳಿದಿರುವ ವಿಮರ್ಶಕ, ಕವಿ ಬಹು ಕಡಿಮೆ ಜಾತಿಯ ವಸ್ತು ಎಂಬ ಭ್ರಮೆಯಲ್ಲಿ ನೂರು ತಪ್ಪು ಮಾಡುತ್ತಾನೆ. ಇವನಿಗೆ ಹಿಂದಿನ ಮಹಾಕವಿಯಲ್ಲಿ ಕೂಡ ಹುಳುಕು ಕಾಣಿಸುತ್ತದೆ. ಹೊಸಬರ ಮಾತನ್ನು ಹೇಳಲೇ ಬೇಡ. ಅಥವಾ ವಿಮರ್ಶಕ, ಇವನು ಹಾಗೆಂದ, ಇನ್ನೊಬ್ಬ ಹೀಗೆಂದ, ಎನ್ನುವನು ಹೊರತು, ತಾನೆನ್ನುವುದು ಏನು, ಅದನ್ನು ಹೇಳುವುದಿಲ್ಲ. ಮತ್ತೆ ಕೆಲವರು ಬೆಳಗಾಗ ಹೊಗಳಿದ ಕೃತಿಯನ್ನು ಸಂಜೆಗೆ ತೆಗಳುತ್ತಾರೆ; ಅವರ ಬುದ್ಧಿ ಅಷ್ಟು ಚಪಲ. ಮತ್ತೆ ಕೆಲವರು ನಾವು ಬಹು ಬುದ್ಧಿವಂತರು ಎಂದು ಹತ್ತು ಜನ ಚೆನ್ನಾಗಿದೆ ಎಂಬ ಕೃತಿಯಲ್ಲಿ ಇಲ್ಲದ ತಪ್ಪನ್ನು ಹುಡುಕುವರು ; ಹತ್ತು ಜನ

ಚೆನ್ನಾಗಿಲ್ಲ ಎಂದದ್ದರಲ್ಲಿ ಗುಣ ಇದೆ ಎಂದು ಮುಷ್ಕರ ಮಾಡು ವರು. ಕೆಲವರು ಕಾವ್ಯದ ಜೀವ ಮಾತಿನಲ್ಲಿದೆ ಎನ್ನುವರು, ಕೆಲವರು ಅಲಂಕಾರದಲ್ಲಿದೆ ಎನ್ನುವರು, ಕೆಲವರು ಶೈಲಿಯಲ್ಲಿದೆ ಎನ್ನುವರು, ಕೆಲವರು ಕೃತಿಗಳನ್ನು ರಚಿಸ ಹೋಗಿ ಸೋತು ವಿಮರ್ಶಕರಾಗುವರು. "Who cannot win the mis-tress woos the maid." ಕೆಲವರ ಮುಖ್ಯಭಾವ ಕವಿ ಯನ್ನು ಕುರಿತು ಈರ್ಷೆ. ಇವರಲ್ಲಿ ಕೆಲವರು ಶಕ್ತ ಕವಿಗಳೇ ಆಗಿರಬಹುದು. ಕೆಲವರು ವಿಮರ್ಶೆಯ ಕೆಲಸ ತಪ್ಪು ಹುಡುಕು ವುದು ಎಂಬಂತೆ ನಡೆಯುತ್ತಾರೆ. ನೂರು ಒಳ್ಳೆಯ ಗುಣ ವಿದ್ದರೂ ಗಣನೆಗೆ ತಾರದೆ ಎಲ್ಲೋ ಸಿಕ್ಕಿದ ಒಂದು ತಪ್ಪನ್ನು ದೊಡ್ಡದು ಮಾಡುತ್ತಾರೆ. ಮತ್ತೆ ಕೆಲ ವಿಮರ್ಶಕರು ಲೇಖಕನ ಮುಖ ನೋಡಿ ಅವನ ಕಾವ್ಯಕ್ಕೆ ಮಣೆ ಹಾಕುತ್ತಾರೆ: ಆಶ್ರಯ ದಾತನ ಕಾವ್ಯ ಬಹು ದೊಡ್ಡದು ಎಂದು ಹೊಗಳುತ್ತಾರೆ; ತಮಗೆ ಆಗದವನ ಕೃತಿ ಕೆಲಸಕ್ಕೆ ಬಾರದ್ದು ಎನ್ನುತ್ತಾರೆ.

ಇದಿಷ್ಟು ದುಷ್ಟವಾದ ವಿಮರ್ಶೆಯ ಬಗೆಗಳು—ಎಂದು ನಾವೆಲ್ಲ ಒಪ್ಪಿಕೊಳ್ಳಬೇಕು. ದುಷ್ಟ ವಿಮರ್ಶೆಯಲ್ಲಿ ಇನ್ನೆರಡು ಬಗೆಗಳನ್ನು ಹೇಳಬೇಕೆಂದು ಕಾಣುತ್ತದೆ. ಒಂದು ಆಗದ ಕವಿ ಯನ್ನು ಬೇರೆಯ ಹೆಸರಿಟ್ಟು ಬಯ್ಯುವುದು; ಇನ್ನೊಂದು ಬಯ್ಯುವ ವಿಮರ್ಶಕ ಹೆಸರು ಮರೆಸಿಕೊಂಡು ಮರೆಯಿಂದ ಬಯ್ಯುವುದು.

ನಮ್ಮಲ್ಲಿಯೂ, ಲಾಕ್ಷಣಿಕರು ಕಾವ್ಯ ಕಾವ್ಯವಾಗುವುದು ರೀತಿಯಿಂದ ಎಂದು, ರಸದಿಂದ ಎಂದು, ಅಲಂಕಾರದಿಂದ ಎಂದು, ಧ್ವನಿಯಿಂದ ಎಂದು, ಹಟಮಾಡಿ ವಾದಿಸಿದರು. ಹಳೆಯದರ ಒಲವಿನಲ್ಲಿ ಹೊಸದರ ವಿಷಯವಾಗಿ ಅನಾದರ

ತೋರಿದ್ದರಿಂದಲೇ ಇರಬೇಕು ಕಾಳಿದಾಸ ' ಪುರಾಣಮಿತ್ಯೇವ ನ ಸಾಧು ಸರ್ವಂ ನ ಚಾಪಿ ಸರ್ವಂ ನವಮಿತ್ಯವಧ್ಯಂ ' ಎನ್ನಬೇಕಾಯಿತು. ಇದರಂತೆಯೇ ಇವನ " ಮೂಢಃ ಪರಪ್ರತ್ಯಯನೇಯ ಬುದ್ಧಿಃ " ವಾಕ್ಯ, ಭವಭೂತಿಯ " ಯೇ ನಾಮ ಕೇಚಿದಿಹ " ಶ್ಲೋಕ, ವಿವೇಕ ಬೃಹಸ್ಪತಿ ನೃಪತುಂಗನ ಜೋಕೆ ಮಾತು, ಪಂಪ ಪೊನ್ನ ಹರಿಹರರ ಆತ್ಮ ಪ್ರತ್ಯಯದ ವಾಕ್ಯಗಳು, ರನ್ನನ " ದರವುರಮುಮಂಟಸುಂಟೆಯುಂ " ಇಂದ ಇಂದಿನ ಹಿರಿಯ ವಿಡಂಬನ ಕವಿ ಶ್ರೀರಾಜರತ್ನಂರ "ಸೋಸೋಡು" ಪದ್ಯದ ತೆರದ ಅನೇಕ ಪದ್ಯ ಕಾವ್ಯ ರಚನೆಗೆ ದೂಷಕ, ವಿರುದ್ಧ, ಆದ ಒಂದು ಪರಿಸ್ಥಿತಿಯನ್ನು ಸೂಚಿಸತಕ್ಕವಾಗಿವೆ. ಇದು ಸಾಹಿತ್ಯ ಲೋಕದಲ್ಲಿ ತಪ್ಪಿದ್ದಲ್ಲ. ಯೋಗ್ಯತೆ ಇಲ್ಲದವನು ಕಾವ್ಯ ಬರೆಯ ತೊಡಗುವುದು ಎಂದೂ ಉಂಟು ಒಬ್ಬ ಕೀಟ್ಸ್ ಸಹಜವಾದ ಕವನ ಶಕ್ತಿಯ ಭರವಸೆಯಿಂದ ಮಹಾ ಕಾವ್ಯ ಬರೆಯಲು ತೊಡಗುವುದೂ ನಿಜ. ಆಗಲೇ ಅವನ ಶಕ್ತಿಯ ಮಹತ್ವವನ್ನು ಕಾಣಲಾರದ ಕಾವ್ಯಪ್ರೇಮಿ ಯೋಗ್ಯತೆ ಇಲ್ಲದವನೊಂದಿಗೆ ಅವನನ್ನು ಸೇರಿಸಿ " Go back to your Pill boxes " ಎಂದು ಹೇಳುವುದೂ ನಿಜ. ಸ್ವಲ್ಪ ನಿಟ್ಟಿಸಿನೋಡಿದರೆ ಒಂದು ಸಂಗತಿ ಸ್ಪಷ್ಟ ಆಗುತ್ತದೆ. ಅನಾರೋಗ್ಯ ಅಂಟುರೋಗ. ಕವಿ ಅಹಂಕಾರದಿಂದ ಆರೋಗ್ಯ ಕಳೆದುಕೊಳ್ಳುತ್ತಾನೆ. ಅದನ್ನು ಅಡಗಿಸುವುದು ತನ್ನ ಕರ್ತವ್ಯ ಎಂದು ಭ್ರಮಿಸಿ, ಆರೋಗ್ಯ ಕಳೆದುಕೊಂಡು, ರಸಿಕ ಅವನನ್ನು ನಿರಾಕರಿಸುತ್ತಾನೆ. ರಸಿಕ ತಾನು ಬಲ್ಲವನೆಂದು ಅಹಂಕಾರದಲ್ಲಿ ಕಾವ್ಯದ ಗುಣವನ್ನು ಕಡೆಗಣಿಸುತ್ತಾನೆ. ಕವಿ ಇದಕ್ಕೆ ಪ್ರತಿಯಾಗಿ ಆರೋಗ್ಯ ಕಳೆದುಕೊಂಡು " ಹೋಗೋ ನೀನು ಕಂಡಷ್ಟೆಷ್ಟು" ಎನ್ನುತ್ತಾನೆ.

ಆತ್ಮಪ್ರಶಂಸೆಯು ದೀರ್ಘವ್ಯಂಗ್ಯವಿಮರ್ಶೆಯ ಪ್ರುತ ಆಗುತ್ತದೆ. ವಿಮರ್ಶೆಯ ಅಸೂಯೆ ಕಾವ್ಯದಲ್ಲಿ ಧಿಕ್ಕಾರವಾಗಿ ಪ್ರತಿಬಿಂಬಿಸುತ್ತದೆ.

ಕವಿಯ ಮಾತು ಹಾಗಿರಲಿ, ವಿಮರ್ಶೆಯ ದೋಷದ ಬೇರು ಎಲ್ಲಿದೆ ಸ್ಪಷ್ಟ. ಅನಾರೋಗ್ಯವಾದ ವಿಮರ್ಶೆಯ ಬೇರು ವಿಮರ್ಶಕನ ಮನಸ್ಸಿನ ಅನಾರೋಗ್ಯ. ವಿಮರ್ಶಕನ ಮನಸ್ಸು ನೀರೋಗಿಯಾಗಿದ್ದರೆ ಅವನ ವಿಮರ್ಶೆ ತಾನಾಗಿ ಚೆನ್ನವಾಗುತ್ತದೆ.

ವಿಮರ್ಶಕ ಒಂದು ದೊಡ್ಡ ಸಂಗತಿಯನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು. ಕೃತಿಕಾರ ವಿಮರ್ಶಕರು ಪಕ್ಷ ಪ್ರತಿಪಕ್ಷ, ಅಲ್ಲ. ಜೊತೆಗೂಡಿ ದುಡಿಯಬೇಕಾದ ಕಲಾಸೇವಕರು. ವಿಮರ್ಶಕ, "ಕಾವ್ಯ ಮುಖ್ಯವಸ್ತು, ವಿಮರ್ಶೆ ಅದಕ್ಕೆ ಸಹಾಯಕವಸ್ತು." ಎಂಬ ಪರಿವೆಯಲ್ಲಿ ತನ್ನ ತಿಳಿವಿನ ಮಿತಿಯನ್ನರಿತು ಟೀಕೆ ಮಾಡಬೇಕು. ಈ ಅರಿವನ್ನು ಹೆಚ್ಚಿಸಿಕೊಳ್ಳಬೇಕು; ತಿದ್ದಿಕೊಳ್ಳಬೇಕು; "ಕವಿಯ ಉದ್ದೇಶವೇನು? ಈ ಕೃತಿ ಅದನ್ನು ಎಷ್ಟರ ಮಟ್ಟಿಗೆ ಸಾಧಿಸಿದೆ" ಎನ್ನುವುದನ್ನು ನೋಡಬೇಕು. "ಕವಿಯ ಭಾವ ಕೃತಿಯಲ್ಲಿ ರೂಪುಗೊಂಡಿತೇ?" ಎಂದು ನೋಡಬೇಕೇ ಹೊರತು, ಅದರಲ್ಲಿ ತನ್ನ ಭಾವ ರೂಪುಗೊಂಡಿತೇ ಎಂದು ನೋಡಬಾರದು. ಮೇಲಾಗಿ ಕೃತಿಯ ಗುಣಗಳನ್ನು ಮುಖ್ಯಮಾಡಿಕೊಂಡು ನಡೆಯುವುದು ವಿಮರ್ಶಕನಿಗೆ ಭೂಷಣ. "Whoever thinks a faultless thing to see thinks what never was nor ever will be." ಹಾಗೂ ತಪ್ಪನ್ನು ಕುರಿತು ಮಾತನಾಡಲೇ ಬೇಕು. ವಿಮರ್ಶಕ ಮೊದಲು ಇದು ತಪ್ಪು ಎನ್ನುವುದು ನಿಜವೇ ಎಂದು ಖಚಿತಮಾಡಿಕೊಳ್ಳ

ಬೇಕು. ಇದು ಪರಮ ಪಾತಕ ಎಂದು ಒದರದೆ, ಇದು ಏಕೋ ಸರಿಯಾಗಿಲ್ಲ ಎಂದು ಕಾಣುತ್ತದೆ-ಎಂದು ಮೃದುವಾಗಿ ಹೇಳ ಬೇಕು. ಎಷ್ಟು ಮೃದುವಾಗಿ ಹೇಳಿದರೂ ಲೇಖಕ ಕೋಪ ಮಾಡಿಕೊಳ್ಳುವುದು ಸಂಭವನೀಯ. ಆದರೆ ಹೇಳುವ ರೀತಿ ಯನ್ನು ನೋಡಿ ಬೇರೆಯವರಾದರೂ ಮೆಚ್ಚುವಂತೆ ನುಡಿಯು ವುದು ವಿಮರ್ಶಕನ ಕರ್ತವ್ಯ. ವಿಮರ್ಶಕ ಲೇಖಕನಿಗೆ "ನಿನಗೆ ಈ ಸಂಗತಿ ತಿಳಿಯದು" ಎನ್ನುವುದು ಬೇಡ, "ನೀನು ಇದನ್ನು ಮರೆತಿದ್ದೀಯೆ ಅಲ್ಲ?" ಎಂದು ಕೇಳುವುದು ಒಳ್ಳೆಯದು.

'ಜ್ಞಾಪಯೇ ನ ತು ಶಿಕ್ಷಯೇ' ಎಂದು ರಾಮನಿಗೆ ಎಚ್ಚರಿಕೆಯ ಮಾತನ್ನು ವಿಜ್ಞಾಪಿಸಿದ ಸೀತಾದೇವಿ ವಿಮರ್ಶಕ ನಿಗೆ ಮೇಲ್ಪಂಕ್ತಿ. 'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಮ್—ಪ್ರಿಯಂಚ ನಾನೃತಂ ಬ್ರೂಯಾತ್' ಎಂದು ಸುಭಾಷಿತದಲ್ಲಿ ವಿಮರ್ಶಕ ಮರೆಯ ಲಾಗದ ಒಂದು ಸೂತ್ರ ಉಕ್ತವಾಗಿದೆ.

ಇನ್ನು ಹೆಸರು ಮರೆಸಿ ಅಥವಾ ಮರೆಸಿಕೊಂಡು ಬಯ್ಯು ವುದು ವಿಮರ್ಶೆಯೇ ಅಲ್ಲ ಎಂದು ಹೇಳಬೇಕಾಗಿಲ್ಲ. ಮರೆ ಯಿಂದ ಹೊಗಳುವುದೂ ವಿಮರ್ಶೆಯಾಗಲಾರದು. ಮರೆಯಿಂದ ಬಯ್ಯುವವರನ್ನು ಷಾಪೆನ್‌ಹಾವೆರ್ "Come out you rascal" ಎಂದ. ಮರೆಯ ಹೊಗಳಿಕೆಯನ್ನು ನೋಡಿ ಜನ ಇದನ್ನು ಕವಿಯೇ ಬರೆದುಕೊಂಡನೆಂದು ನೆನೆದದ್ದುಂಟು. ಸೌಮ ನಸ್ಯದಿಂದ ವರ್ತಿಸುವ ವಿಮರ್ಶಕ ಕವಿ ನಡಸುವ ಸಾರಸ್ವತ ಹೋಮದಲ್ಲಿ ರಸಿಕ ಸದಸ್ಸಿನ ಪ್ರಮುಖನಾಗಿ ಬ್ರಹ್ಮ ಆಗು ತ್ತಾನೆ. ಕಾವ್ಯ ಚೆನ್ನವಾದಾಗ ಅದನ್ನು ರಸಿಕರೊಂದಿಗೆ ಅನು ಭವಿಸಿ ಅವರ ಪ್ರತಿನಿಧಿಯಾಗಿ ಅದು ಸಾರ್ಥಕ ಆಯಿತು ಎಂದು

ತೋರುತ್ತಾನೆ. ಅಲ್ಪಸ್ವಲ್ಪ ತಪ್ಪಿದಾಗ ಇತರರಿಗೆ ತಿಳಿಯದಂತೆ ಅದನ್ನು ಉಪಾಯವಾಗಿ ಸರಿಪಡಿಸುತ್ತಾನೆ.

ಇಂಥ ವಿಮರ್ಶಕನನ್ನು ನಮ್ಮ ಪೂರ್ವಿಕರು ಸಹೃದಯ ಎಂದರು.

ಸಹೃದಯನಾದ ವಿಮರ್ಶಕನಿಂದ ಕವಿಗೆ ತನ್ನ ಯತ್ನ ಸಾರ್ಥಕವಾದದ್ದು ತಿಳಿಯುವಂತೆ ಸಾಮಾನ್ಯ ಜನರಿಗೆ ಕಾವ್ಯದ ಪೂರ್ಣಸುಖ ದೊರೆಯುವುದಕ್ಕೂ ಸಹಾಯ ಆಗುತ್ತದೆ.

ಚಕಮುಕಿ ನಿರ್ಮಿಸಿದ ಕಿಡಿಯನ್ನು ಹಿಡಿದು ಅರಳಿ ಜ್ಯೋತಿಯನ್ನು ಮಾಡಿ ಕಟ್ಟಿಗೆಯನ್ನು ಉರಿಸುವಂತೆ ಕಾವ್ಯದ ಗೂಢವಾದ ಗುಣ ಸಾಮಾನ್ಯ ಚೇತನದ ಅವಗಾಹನೆಗೂ ಬರುವಂತೆ ವಿಮರ್ಶಕ ಒಬ್ಬ ಘಟಕನಾಗಿ ಪರಿಣಮಿಸುತ್ತಾನೆ.

ಕವಿಯನ್ನು, ಕೃತಿಯನ್ನು ಕುರಿತ ಮಾತನ್ನಲ್ಲದೆ ವಿಮರ್ಶೆ ಕಾವ್ಯದ ಲೋಕವನ್ನು ಕುರಿತೇ ಒಂದು ಹೊಣೆಯನ್ನು ವಹಿಸಬೇಕಾಗುವುದು. ಕಾವ್ಯದ ಉದ್ದೇಶ ಕೊನೆಯ ಮಾತಾಗಿ ಹೇಳುವುದಾದರೆ ಅದು ಧರ್ಮವನ್ನು, ಸತ್ಯವನ್ನು, ಸೌಂದರ್ಯವನ್ನು, ಎತ್ತಿ ಹಿಡಿಯಬೇಕು. ಕೆಲವು ವೇಳೆ ಕವಿಗೆ ತಿಳಿವಳಿಕೆ ಸಾಲದೆ ಅಥವಾ ಜನರ ಅಭಿರುಚಿ ಕೆಟ್ಟು ಸಾಹಿತ್ಯ ಅಧರ್ಮ, ಅಸತ್ಯ, ಅಸುಂದರ ಆದದ್ದನ್ನು ಎತ್ತಿ ಹಿಡಿಯಬಹುದು. ಆಗ ಅದನ್ನು ತಡೆಯುವುದೂ ವಿಮರ್ಶಕ ಮಾಡಬೇಕಾದ ಕೆಲಸ. ಬಲ್ಲ ಲೇಖಕ ಪುಂಡು ಮಾತನ್ನು ರುಚಿತ ವಸ್ತುವಾಗಿ ಬಡಿಸಿದಾಗ " Maidens smile where once they blushed before." ಆಗ ಸಾಹಿತ್ಯ monster ಆಗುತ್ತದೆ. ಅದನ್ನು ಖಂಡಿಸುವುದು ವಿಮರ್ಶೆಯ ಮುಖ್ಯ ಕರ್ತವ್ಯ.

ಬಲ್ಲ ಜನ ಉತ್ತಮ ಕೃತಿಗಳ ನಿರ್ಮಾಣದಿಂದ ಉತ್ತಮ ವಿಮರ್ಶನದಿಂದ ಉತ್ತಮ ಕಾವ್ಯದ ವಾಚನದಿಂದ ಜನಾಂಗದ ತಿಳಿವನ್ನು ರುಚಿಯನ್ನು ಗುರಿಯನ್ನು ಸರಿಪಡಿಸುತ್ತಿರಬೇಕು, ತಿದ್ದುತ್ತಿರಬೇಕು, ಮೇಲಕ್ಕೆ ಎತ್ತುತ್ತಿರಬೇಕು.

ನೃಪತುಂಗನ ದಿನದ ಕನ್ನಡಿಗರು ಕುರಿತೋದದೆಯೇ ಕಾವ್ಯ ಪ್ರಯೋಗ ಪರಿಣತ ಮತಿಗಳಾದದ್ದು ಹೀಗೆಯೇ.

ಹೀಗೆಯೇ ನಮ್ಮ ಹಳ್ಳಿಯ ಜನ ಸ್ವತಃ ಕವಿಗಳಾಗಿ ಮುತ್ತು ರತ್ನದಂತಹ ಮಾತುಗಳಲ್ಲಿ ನಮ್ಮ ಜಾನಪದ ಕವಿತೆಯನ್ನು ಮಾಡಲು ಕಲಿತದ್ದು, ತೊಡಗಿದ್ದು.

ಹೊಸ ಕಾಲದಲ್ಲಿ ಹೊಸ ಕವಿತೆಯನ್ನು ಕುರಿತ ವಿಮರ್ಶೆ ಮಾಡಬೇಕಾದ ಕೆಲಸ ಇದೇ ; ಬೇರೆ ಅಲ್ಲ.

ಉಷಸ್ಸನ್ನು ಕುರಿತು ವೇದದ ಋಷಿ ಹೇಳಿದಂತೆ ಕಾಲ ಪುನಃ ಪುನಃ ಜಾಯಮಾನ, ಪುರಾಣ. ಕಾಲದಂತೆ ಜೀವನ, ಜೀವನದಂತೆ ಕಾವ್ಯ ನಿತ್ಯ ನೂತನ, ನಿತ್ಯ ಪುರಾತನ.

ಕಾವ್ಯದ ಸಹೃದಯವಾಗಿ ವಿಮರ್ಶೆ ನಿತ್ಯ ನೂತನ ನಿತ್ಯ ಪುರಾತನ ಆಗಬೇಕು. ಅದು ಹೀಗಾಗಬೇಕಾದರೆ ವಿಮರ್ಶಕ ತುಂಬ ಓದಿಕೊಂಡಿರಬೇಕು ; ತುಂಬ ಯೋಚಿಸಿರಬೇಕು ; ತುಂಬ ಎಚ್ಚರ ವಹಿಸಬೇಕು ; ತುಂಬ ಸೌಹಾರ್ದದಿಂದ ವರ್ತಿಸಬೇಕು. ತನ್ನ ವಿಮರ್ಶೆ ಆರೋಗಿಯಾಗಲಿ, ಸುಂದರವಾಗಲಿ, ಸಹಾಯಕ ಆಗಲಿ ಸಾರ್ಥಕ ಆಗಲಿ ಎಂದು ಹಾತೊರೆಯಬೇಕು. ಹಂಬಲಿಸಬೇಕು. ತಪಿಸಬೇಕು.

ಸಾಹಿತ್ಯ ಮತ್ತು ಲೋಕಶಾಂತಿ

ವಿ. ಸೀತಾರಾಮಯ್ಯ

ಶಾಂತಿಯ ಸೇವೆಗೆ ಸಾಹಿತ್ಯ ಒದಗಬೇಕು, ಅದರ ಸಾಧನೆಗಾಗಿ ತಮ್ಮ ಕೈಯಲ್ಲಾದುದನ್ನೆಲ್ಲ ಸಾಹಿತಿಗಳು ಮಾಡಬೇಕು ಎಂಬುದು ಎಲ್ಲರೂ ಒಪ್ಪುವ ಮಾತು. ಸಾಹಿತ್ಯವೇ ಏನು? ರಾಜಕೀಯ, ಅರ್ಥಸಾಧನೆ, ವಿಜ್ಞಾನ, ಸಮಾಜ ವಿಜ್ಞಾನದರ್ಶನಗಳು, ವಿದ್ಯಾ ಶಿಕ್ಷಣ ಈ ಎಲ್ಲವೂ ಇಂಥ ಸಾಧನೆಗೆ ದುಡಿಯಬೇಕು. ಅವವುಗಳ ರೀತಿಯಲ್ಲಿ ಅವವು: ಹುಟ್ಟಿದ ಸಾಹಿತ್ಯವೆಲ್ಲ ಇದನ್ನು ಮಾಡದು; ಇದನ್ನು ಮಾಡುವುದೆಲ್ಲ ಉತ್ತಮ ಸಾಹಿತ್ಯವಾಗದೆ ಇರಬಲ್ಲುದು. ಹೀಗೇಕೆ ಎಂದರೆ, ಸಾಹಿತ್ಯದ ಉದ್ದೇಶವೂ ರೀತಿಯೂ ವಿಶೇಷ ಬಗೆಯವು. ನೇರವಾಗಿ ಇಂಥ ಗುರಿಯನ್ನು ಸಾಧಿಸಲು ಯತ್ನಿಸಿ ಸಾಹಿತ್ಯ ಕೃತಾರ್ಥವಾಗಬಹುದು; ಇಲ್ಲವಾದರೆ ಇದನ್ನು ಸಾಧಿಸಲು ಯೋಗ್ಯರಾದ ಜನರನ್ನೂ ಸಂಸ್ಕಾರದ ಒಂದು ಆವರಣವನ್ನೂ ಉತ್ಪತ್ತಿಮಾಡಿ ಆ ಮೂಲಕ ಸೇವೆಸಲ್ಲಿಸಬಹುದು. ಬಹುಮಟ್ಟಿಗೆ, ನೇರವಾಗಿ ಮಾಡುವುದಕ್ಕಿಂತ ಪರೋಕ್ಷವಾದ ಹೀಗೆ ಮಾಡುವ ದಾರಿ ಅದರದು.

ಕೃತಿಕಾರರು ಏಕೆ ಕಾವ್ಯ ನಿರ್ಮಾಣ ಮಾಡುತ್ತಾರೆಂಬುದು ಬಹು ಕಾಲದಿಂದ ತಿಳಿದ ವಿಷಯ: ಕೀರ್ತಿಬೇಕು; ಹಣ ಸಂಪಾದಿಸಬೇಕು; ವ್ಯವಹಾರದ ಅರಿವಾಗಬೇಕು; ಶಿವೇತರವಾದುದ್ದು ನಾಶವಾಗಬೇಕು; ಸದ್ಯಃ ಆನಂದವೂ ನಿರ್ಬಂಧಗಳಿಂದ ಬಿಡುಗಡೆಯೂ ದೊರೆಯಬೇಕು–ಎಂದು. ನುಡಿ ಉಂಟು

I sing because I must ಎಂಬುದು ಸಹಜವಾದ ಇನ್ನೊಂದು ಕಾರಣ. ಒಳಗೆ ಮನಸ್ಸಿನ ತುಂಬು, ಭಾರ, ಒತ್ತಡ ಹಾಗಿವೆ. ಹಾಡದೆ ವಿಧಿಯಿಲ್ಲ; ಮನಸ್ಸು ಹಗುರವಾಗದು; ಆದ್ದರಿಂದ ಹಾಡುತ್ತೇನೆಂಬುದು ಇದು. ಹಾಗೆಯೇ–'ಜನ ಬದುಕಬೇಕೆಂದು' ರಾಘವಾಂಕನು ತನ್ನ ಕಾವ್ಯವನ್ನು ರಚಿಸಿದನಂತೆ. ಕಾರಣ ಯಾವುದೇ ಆಗಲಿ ಕವಿಯು ಕಾಣ್ಕೆ, ಅವನ ನೇಮ ಅವನ ಪ್ರೇರಣೆಗೆ ಒಳಪಟ್ಟು ನಡೆದರೆ ಕೃತಿ ಸಾರ್ಥಕವಾಗುತ್ತದೆ.

ಹೊರ ಪ್ರಯೋಜನಗಳಿಗಾಗಿ ಸಾಹಿತ್ಯವನ್ನು ದುಡಿಸಿರುವುದುಂಟು. ಕನ್ನಡದಲ್ಲಿಯಂತೂ ಬಹುವಾಗಿ ದುಡಿಸಿಕೊಂಡರು; ಆಳರಸರು, ಇತರ ಶ್ರೀಮಂತರು, ತಮ್ಮ ಕೀರ್ತಿ ಪ್ರಕಾಶನಕ್ಕೂ ಸಂತೋಷ ವಿನೋದಗಳಿಗೂ ದುಡಿಸಿ ಕೊಂಡರು. ಇಂದು ಬಗೆ ಬಗೆಯ ಸಮತಾವಾದಗಳಿಗೆ, ವ್ಯಕ್ತಿ ಸ್ವಾತಂತ್ರ್ಯ ವಾದಕ್ಕೋ ಯಾವುದೋ ಜನತೆಗಳವರ ಸರ್ವೋತ್ಕೃಷ್ಟತೆಯ ಅಥವ ಪ್ರಾಬಲ್ಯದ ಸಾಧನೆಗೊ ಬಳಸಿದ್ದಾರೆ. ಇವೆಲ್ಲದರ ಗೆರೆ, ಬರೆ, ಸಾಹಿತ್ಯದ ಮೇಲೆ ಬಿದ್ದಿದೆ. ಅಂತೇ ಎಲ್ಲ ಕಾಲದಲ್ಲಿಯೂ ಶಾಂತಿಯನ್ನು ಬಯಸಿದ್ದಾರೆ. ಇಂದಿನ ಅಗತ್ಯವೂ ಅದೇ. ಲೋಕ ಶಾಂತಿ ಹೇಗೆ ಲಭಿಸೀತು, ಉಳಿದೀತು; ಅಶಾಂತಿ ಕಾರಕಗಳು ಹೇಗೆ ಮುರಿದು ಬಿದ್ದಾವು; ಲೋಕನಾಶಕವಾದ ಯುದ್ಧಗಳು ನಡೆಯದಂತೆ ಸೌಮನಸ್ಯವೂ, ಸೋದರಿಕೆಯ ಸಾಹಸಗಳೂ, ತಾಳ್ಮೆಗಳೂ ಜನ ಜನಾಂಗಗಳಲ್ಲಿ ಹೇಗೆ ರಚಿತವಾದಾವು; ಸಾಹಿತಿಗಳೂ ಇದಕ್ಕೆ ಏನು ಮಾಡಬಹುದು–ಮುಂತಾಗಿ ಯೋಚನೆ ಬಲಿಯುತ್ತಿದೆ. "ಓ ಪೊಲ್ಲ ಯುದ್ಧಮೇ ಎಂದು ನಿಲ್ವೆಯ್; ಓ ತಾಯಿ ಶಾಂತಿಯೇ ಎಂದು ಗೆಲ್ವೆಯ್" ಎಂಬ ಒಂದು ಮೇಳ ಗೀತದ ಮೊರೆ ಗ್ರೀಸಿನ ಅಥೆನ್ಸಿಗೂ ಇಂದಿನ ಕನ್ನಡನಾಡಿಗೂ

ನಡುವೆ ಮೂರು ಸಾವಿರ ವರ್ಷಗಳ ಸೇತುವನ್ನು ಕಟ್ಟಿ ಈ ಅಗತ್ಯವನ್ನು ಕನ್ನಡಕ್ಕೆ ಕಾಣಿಸಿತು. ಆಶ್ರಮಗಳಲ್ಲಿ, ನಾಡಿನ ಮನೆ ಮಠ ದೇವಾಲಯಗಳಲ್ಲಿ ಇದೇ ಶಾಂತಿ ಪಾಠ ನಡೆಯಿತು. ಆದರೇನು? ಶಾಂತಿ, ಒಳಗಾಗಲಿ, ಹೊರಗಾಗಲಿ ಕಟ್ಟಿದ ಹಾಗೆ ಕಾಣಲಿಲ್ಲ. ಶಾಂತಿಯ ಕೂಗು ಎಂದಿಗೂ ತಬ್ಬಲಿಯೋ ಏನೋ ಎಂಬಂತಿದೆ ಸರ್ವ ಕಾಲದ ಲೋಕ ಜೀವನ, ಅಲ್ಲಿ ಬೆಳೆವ ಉಬ್ಬಸ.

ಏಕೆಂದರೆ, ಲೋಕ ಜೀವನವನ್ನು ನಡೆಸುವ ಪ್ರಭಾವಗಳು ಒಂದುಕಡೆ ಅಜ್ಞಾನ, ಇನ್ನೊಂದು ಕಡೆ ರಾಗ ದ್ವೇಷಗಳು. ಇವು ಪ್ರಬಲವಾಗಿರುವವರೆಗೂ ಯಾವ ಧರ್ಮವಾಣಿಯಾಗಲಿ ಯಾವ ಸಾಹಿತಿಯ ಕರೆಯಾಗಲಿ ಯಾರ ಕಿವಿಯನ್ನು ಮುಟ್ಟೀತು? ಅಲ್ಲದೆ ಸಾಹಿತಿಗಳನ್ನು ಕೇಳುವವರು ಯಾರು? ಎಂದು ಕೇಳಿದ್ದಿದ್ದಗೆ ಇವೊತ್ತು ಕೇಳಲಿಲ್ಲವೆನ್ನೋಣ? ಲೋಕ ವ್ಯವಹಾರ ಸ್ನೇಹಕ್ಕೆ ತಿರುಗಿದರೆ, ಲಾಭ ಕಾರ್ಪಣ್ಯ, ಸೊಕ್ಕು ಕ್ರೋಧಗಳಿಗೆ ಒಲಿಯದಾದರೆ, ಆ ಬಗೆಗೆ ಶಿಕ್ಷಣ ಸಂಸ್ಕಾರ ನಡೆದರೆ ವ್ಯಕ್ತಿಗೆ ಉಪಶಾಂತಿಯೂ ಲೋಕಕ್ಕೆ ಶಾಂತಿಯೂ ಹೇಗೆ ದೊರೆತಾವು? ವಿದ್ಯಾ ಶಿಕ್ಷಣದ ಗುರಿ ಹೇಗೋ ಸಾಹಿತ್ಯದ ಗುರಿಯೂ ಇನ್ನೊಂದು ರೀತಿ ಹಾಗೇ: ಸಂಸ್ಕಾರಿಗಳನ್ನೂ ಮುಕ್ತರನ್ನೂ ತಯಾರು ಮಾಡುವುದು. ಲೋಕದಿಂದ ಅತಿಯಾಗಿ ಉದ್ವೇಗಗೊಳ್ಳದೆ ಲೋಕವನ್ನು ಅತಿಯಾಗಿ ಉದ್ವೇಗಗೊಳಿಸದೆ ಬಾಳಬಲ್ಲ ಮೃದು ಸಂಸ್ಕಾರವುಳ್ಳವರಿಂದ ಮಾತ್ರ ಲೋಕ ಕಲ್ಯಾಣ ಸ್ಥಾಪಿತವಾದೀತು.

ಸಾಮಾನ್ಯ ಸಾಹಿತಿಗಳ ಮನೋಭೂಮಿ ಹೇಳಿ ಕೇಳಿ ರಾಗದ ಒತ್ತಡಕ್ಕೆ ಈಡಾದ್ದು; ಲೋಕದ ಜನದಲ್ಲಿ ಎಷ್ಟು ಬಗೆಯ ನಯ ಉಂಟೊ ಅಷ್ಟು ಬಗೆಯೂ ಸಾಹಿತಿಗಳಲ್ಲಿ ಉಂಟು.

ಲೋಕ ಶಾಂತಿ ಒಂದು ಬೆಲೆಯೆಂದು ಅವರ ಮನಸ್ಸು ಕಂಡರೆ ಅವರ ಕೃತಿ ಅದನ್ನು ರೂಪಿಸೀತು. ಇಲ್ಲವಾದರೆ ಇಲ್ಲ.

ಕಷ್ಟ ಇನ್ನೂವರೆಗೂ ಇದು. ಹಲವರು ಒಳ್ಳೆಯವರಿಗೂ ಅಲ್ಲದವರಿಗೂ ಶಾಂತಿ ಒಂದು ಗನ್ತ್ಯವೇ ಅಲ್ಲ. ಶಾಂತಿ ಸಾಧಿಸುವುದೇನನ್ನು? ಲೋಕ ಹಿತವನ್ನು ತಾನೇ? ಯಾವ ಬಗೆಯದು ಆ ಲೋಕ ಹಿತ? ಅದನ್ನು ಸ್ಥಾಪಿಸುವ ವಿಧಾನ ಯಾವುದು? ಎಂಬಂಶದಲ್ಲಿಯೇ ತಿಕ್ಕಾಟ ಬಂದೀತು. ಒಬ್ಬೊಬ್ಬರದು ಒಂದೊಂದು ಮಾರ್ಗ. ಉಗ್ರಮಾರ್ಗ, ಸಂಪ್ರದಾಯ ಪಾಲನೆಯ ಮಾರ್ಗ, ಮಧ್ಯಮಮಾರ್ಗ; ಇವರಲ್ಲಿ ಒಡಂಬಡಿಕೆ ಬಾರದು. ಇವರ ಉತ್ಸಾಹಗಳಲ್ಲಿ ತೀವ್ರತೆ ಉಂಟು; ಅಸಮಾಧಾನ ಉಂಟು; ಬಿಗಿಉಂಟು. ಇವುಗಳಿಂದ ಮನಸ್ತಾಪ ಹೆಚ್ಚುತ್ತದೆ. ಇನ್ನು ಕೆಲವರಿಗೆ ಶಾಂತಿ ಸಪ್ಪೆ; ಅದರಲ್ಲಿ ರಂಗು, ಚುಂಗು ಇಲ್ಲ. ಇನ್ನು ಕೆಲವರಿಗೆ ಶಾಂತಿ ಹೆಚ್ಚಿದರೆ ಉದ್ಯೋಗವೂ ಪ್ರಯೋಜನವೂ ಹೋಗುವುವು. ಅಶಾಂತಿಯಿಂದಲೇ ಅವರಿಗೆ ಲಾಭ; ಪ್ರಭಾವ. ಅಂಥವರ ಮಾತಿನ ಕಣ್ಣುಕಟ್ಟು ತುಂಬಾ ಮೋಹಕವಾಗುವುದು. ಕುಲ, ಬಣ್ಣ, ಮತ, ದೇಶ, ತತ್ವ, ಧ್ಯೇಯ, ಮಾನ ಎಂಬ ಮುಂತಾದ ಹೆಸರಲ್ಲಿ ಮೋಹಗಳನ್ನು ಕಟ್ಟಿ ಅರಿಯದ ಜನರ ರಕ್ತವನ್ನು ಕುದಿಸುವ ಶಕ್ತಿ ಅವರದು. ಅಂತೆಯೇ, ಒಂದು ಪ್ರಕಾರದ: ಮಂಗಳವೇ ಮಂಗಳ, ಮತ್ತೊಂದಲ್ಲ, ಎಂಬ ಅತಿ ಭಕ್ತಿಯೂ ಅಶಾಂತಿ ಕಾರಣವಾಗುವುದು. ಈ ಭಕ್ತಿ ಪ್ರೀತಿಯದೇ ಒಂದು ವಿಕಾರ. ಪ್ರೀತಿ ಇಂಥಲ್ಲಿ ಅಸಹನೆ, ಕ್ರೋಧ, ಅಸೂಯೆಗಳನ್ನು ಬೆಳಸುವುದು. ಹಾಗೆಯೇ, ವ್ಯಕ್ತಿಗಳಿಗಿರುವಂತೆಯೇ ಜನತೆಗಳಿಗೂ ಕರ್ಮಫಲಗಳು ಬೇರೆ ಉಂಟು. ಎಂದಿನದೋ ನೆನಪು, ನಷ್ಟ, ಆಕ್ರೋಶದ ಕಾರಣವಾಗಿ ಮುಯ್ಯಿ

ಮಸೆಯುತ್ತದೆ. ಸಾಹಿತಿಯ ಕಣ್ಣು ಲೋಕ ಸ್ವರೂಪದ ಈ ಕಡೆ ಇರಬೇಕು ನಿಜ. ಆದರೆ ಅವನ ಪಕ್ಷಪಾತ ಪೂರ್ವಗ್ರಹಗಳು ಹೇಗೋ? ಅವನನ್ನು ತಿದ್ದುವವರೂ ತಡೆಯುವವರೂ ಯಾರು? ಇನ್ನೊಂದು ಸಂಗತಿ: ನಮಗೇ ಆಗಲಿ—ಯಾವುದಾದರೂ ಪರಮ ಧರ್ಮ—ಪರಮ ಕರ್ತವ್ಯ ಉಂಟೆ? ಅವುಗಳ ರಕ್ಷಣೆಗಾಗಿ, ಪೋಷಣೆಗಾಗಿ ನಮ್ಮ ನಿಷ್ಠೆ ಎಲ್ಲಿಯವರೆಗೂ ನಿಂತೀತು? ಅದ ರೊಳಗೇ ಬಾಳಿಯೇವೆ? ಅದಕ್ಕಾಗಿ ಸಾಯಲು ಸಿದ್ಧರೆ ಎಂಬು ದನ್ನು ಆಲೋಚಿಸಬೇಡವೇ? ಲೋಕದಲ್ಲಿ ಒಂದು ಅನ್ಯಾಯ, ಸ್ವಲ್ಪ ಅಜ್ಞಾನ, ಕೊಳೆ, ಬಡತನ ಇದ್ದರೂ ನನಗೆ ಶಾಂತಿ ಇಲ್ಲ ಎಂಬವನಿಗೆ ಶಾಂತಿಪಾಠದ ಅರ್ಥ ಬೇರೆಯಾಗುವುದು. ಪ್ರಗತಿ ಯಲ್ಲಿ ಗುರಿ ಕ್ರಿಯಾ ವಿಧಾನ ಮನಸ್ಸು ಎಲ್ಲರವೂ ಹೊಂದಿದರೆ ಶಾಂತಿ ಕಲ್ಯಾಣಗಳ ಸಾಧನೆ ಸುಲಭ. ಈ ಹೊಂದಿಕೆಯನ್ನು ನಿರೀಕ್ಷಿಸಬಹುದೇ? ಹಾಗೆಯೇ ಇರುವುದನ್ನು ಎಲ್ಲರೂ ನಡೆ ಸೋಣ; ಯಾವ ಮಾರ್ಪಾಡೂ ಸದ್ಯಃ ಬೇಡ ಎಂದು ಅದಕ್ಕಾಗಿ ಎಲ್ಲರೂ ದುಡಿಯುವುದು ಶಕ್ಯವಾದರೆ ಅದೂ ಶಾಂತಿ ಸಾಧಕವೇ ಸರಿ. ಇದೆಲ್ಲ ಶಕ್ಯವೋ, ಸರಿಯೋ ಯೋಚಿಸಬೇಕಾದ್ದು.

ಅಂತಃಕರಣ ಶುದ್ಧಿ ಬಲಿತು, ಸಾತ್ವಿಕ ಹಬ್ಬಿ, ಸೌಹಾರ್ದಕ್ಕೇ ಬಾಳು ತಿರುಗುವಂತೆ ಮಾಡುವ ಕೃತಿಗಳೂ ಕೃತಿಕಾರರೂ ನಿಜ ವಾಗಿ ಕೃತಿಗಳು. ಕಾರ್ಯಪ್ರವೃತ್ತಿಯನ್ನುಂಟುಮಾಡುವ ಎಲ್ಲ ಅಂತಃಕರಣಗಳೂ ಶುಚಿಯಾಗಿ ನಿಷ್ಕ್ರೋಧವಾದರೆ ಮಾತ್ರ ಇದು ಸಾಧ್ಯ. ರಾಮನ ವನವಾಸದ ಸಂಗತಿಯನ್ನು ಕೇಳಿ ಲಕ್ಷ್ಮಣನಿಗೆ ಕೋಪಾವೇಶ ಬಂದಾಗ "ನಿನ್ನ ಕೋಪ ಅನಾರ್ಯ; ಕ್ಷತ್ರಧರ್ಮಾಶ್ರಿತವಾದ್ದು; ಧರ್ಮವನ್ನು ಆಶ್ರಯಿಸು, ತೈಕ್ಷ್ಣ್ಯವ ವನ್ನು ಬಿಡು" ಎಂದು ರಾಮ ತಮ್ಮನಿಗೆ ಉಪದೇಶಮಾಡಬಲ್ಲವ

ನಾದ;_ಆತನ ಸಾತ್ವಿಕ ಆ ಉನ್ನತಿಯುದಾದ್ದರಿಂದ. ಹಾಗೆಯೇ, ರಾವಣನು ಸತ್ತಮೇಲೆ 'ಆಮರಣಾಂತಾನಿ ವೈರಾಣಿ' ಎನ್ನುವುದು ಆವನಿಗೆ ಶಕ್ಯವಾಯಿತು. ಆತನಿಗೆ ತಕ್ಕ ಹೆಂಡತಿ ಸೀತೆ. ತನಗೆ ಕಾಟಕೊಟ್ಟವರನ್ನು ದಂಡಿಸಲು ಅವಕಾಶವಿರುವಾಗ "ಕಾರ್ಯಂ ಕರುಣಮಾರ್ಯೇಣ; ನ ಕಶ್ಚಿತ್ ನಾಪರಾಧ್ಯತಿ " ಎಂದ ಮಹಾತ್ಮಳು ಆಕೆ. ಕವಿವಾಲ್ಮೀಕಿ ಇಂಥಲ್ಲಿ ದೊಡ್ಡವರ ದೊಡ್ಡ ತನದ ಲಕ್ಷಣವನ್ನು ತೋರಿಸಿದ್ದಾನೆ. ಹಾಗಲ್ಲದೆ Our guns and bombs will answer you ಎಂದೊ 'ಮದಾಂಧ ಮಾತಂಗ ವಿಭಿನ್ನಸಾಲಾ । ಹತಪ್ರವೀರಾದ್ರುತಭೀತಪೌರಾಃ ॥ ತ್ವತ್ತೇಜಸಾ ದಗ್ಧವಿನಷ್ಟ ಶೋಭಾ । ದ್ವಿಷಾಂ ಪುರಃ ಪಶ್ಯತು ರಾಜ ಲೋಕಃ ॥ ಎಂದೊ ವೀರಾಶೀರ್ವಾದ ಮಾಡಿದರೆ, ಅದಕ್ಕೆ ರೋಮಾಂಚಗೊಂಡು ಮೆಚ್ಚಿಕೆ ಕೊಟ್ಟರೆ ಗತಿಯೇನು ? ಭೀಮ ದುರ್ಯೋಧನರ ನಂದದ ಕ್ರೋಧ ಚಲ ಆಟೋಪಗಳು ಲೋಕ ನಾಶಕವಾದುವಲ್ಲವೇ ? ಆ ವೀರವನ್ನೂ ರೌದ್ರವನ್ನೂ ವೈಭವ ವಾಗಿ ಮೆಲುಕುತ್ತಿದ್ದರೆ ಶಾಂತಿಯೆಲ್ಲಿ ? 'ಸಾಮಾನ್ಯನೆ ಭವ ತ್ಕೇಶ ಪಾಶ ಪ್ರಪಂಚಂ' ಎಂದೋ 'ಕುರುರಾಜರತ್ನ ಮಕು ಟೋತ್ಕೂಟಾಂಘ್ರಿ ಸಂಘಟ್ಟ ಸಂಗರಂ'—ಎಂದೋ ನಲಿದರೆ ಶಾಂತಿಯೆಲ್ಲಿ? We bathed their streets in their blood, made orphans of their children and widows of thcir women ಎಂದು ವಿಜೃಂಭಿಸಿದರೆ ?— ಶಾಂತಿಗೆ ಅವಕಾಶವೆಲ್ಲಿ ? ಕೋಪಕ್ಕೂ ಮುಯ್ಯಿಗೂ ಪ್ರಕೃತಿ ತಂತ್ರವೆಲ್ಲ ನೆರವಾಗುವುದು. ಧರ್ಮಕ್ಕೂ ತಾಳ್ಮೆಗೂ ತಪಸ್ಸು ಬೇಕು; ಸಂಯಮ ಬೇಕು; ಶ್ರಮ ಬೇಕು; ಸಂಸ್ಕಾರ ಬೇಕು.

ಶಾಂತಿ ಸಾಧನೆಗೇ ಕೃತಿ ನಿರ್ಮಾಣವಾಗುವುದು ಮೇಲು

ಎಂದರೆ ಸಾಹಿತಿ ತನ್ನದಲ್ಲದ ಹೊರಗಿನ ಪ್ರಯೋಜನಕ್ಕೆ ದುಡಿಯ ಬೇಕಾಗುವುದು. ಶಕ್ಯವಾದರೆ ಹಾಗೂ ಗ್ರಂಥಗಳು ಬರಲಿ. ಇಲ್ಲವಾದರೆ ವಿರಸ ವಿರೋಧಗಳನ್ನು ಬೆಳಸುವಂಥವು ಬೇಡ; ಅಸಾಮಾಜಿಕವಾದವನ್ನು ನಿರಾಕರಿಸೋಣ ಎಂಬ ಬುದ್ಧಿ ಯಾದರೂ ಬೆಳೆಯಬೇಕು. ಇಲ್ಲಿ ಪುನಃ ನಿರ್ಣಯ ಕಷ್ಟ. ಇವ್ರೊತ್ತಿನ ಲೋಕಜೀವನದ ಒತ್ತಡದಲ್ಲಿ ನೂರು ಕೂಗುಗಳು; ದಾರಿ ಗಮ್ಯ ನೂರಾರು. ಯಾವ ರೀತಿ ನೀತಿ ಶಾಂತಿಸಾಧಕವೋ, ಯುದ್ಧವನ್ನೂ ಯುದ್ಧಭಯಗಳನ್ನೂ ಯಾವುವು ದೂರಮಾಡ ಬಲ್ಲವೋ ವಿಶದಪಡಿಸುವ ಧರ್ಮನಾಯಕರಿಲ್ಲ; ಇರುವವರಲ್ಲಿ ಏಕಮತವಿಲ್ಲ. ಈ ನಡುವೆ ಸಾಹಿತಿಗಳೆಲ್ಲ ತಮ್ಮ ಸುತ್ತಲ ಪ್ರಪಂಚದಲ್ಲಿ ವೈಮನಸ್ಯವನ್ನು ಬೆಳಸುವ, ಕಹಿ, ವಿಷ, ಕೊಳೆ, ಚಲಗಳನ್ನು ಹರಡುವಂಥವನ್ನು ಬರೆಯುವುದಿಲ್ಲ, ಪ್ರಚಾರ ಮಾಡುವುದಿಲ್ಲ ಎಂದು ನೇಮ ಹೊತ್ತರಾದರೂ ಉಪಕಾರ ವಾದೀತು. ಅಂಥ ಪ್ರತಿಜ್ಞೆ ಮಾಡುವವರು ಯಾರು? ವಿಜ್ಞಾನಿ ಗಳು ನಾಶಕಾರಕಯಂತ್ರಗಳನ್ನೂ ಸಿಡಿಮದ್ದುಗಳನ್ನೂ ಮಾಡುವು ದಿಲ್ಲವೆಂದಾರೆ? ರಾಜಕಾರಣಿಗಳು ಲಾಭಲೋಭಗಳಿಗೆ ಎಡೆ ಗೊಡುವುದಿಲ್ಲವೆಂದು ಪಣತೊಟ್ಟಾರೆ? ಹೇಗಾದೀತು? ಆದರೆ ಮನಸ್ಸು ಈ ಯಾವ ಕಡೆ ಸಡಿಲವಾದರೂ ನಾವು ಬಯಸುವ ಫಲ ಪರಿಣಾಮ ದೊರಕದು. ಜೊತೆಯಲ್ಲಿರೋಣ, ಜೊತೆಯಲ್ಲಿ ಊಟ ಮಾಡೋಣ, ಸಾಹಸಗಳನ್ನೂ ಜೊತೆಯಲ್ಲಿ ಮೆರೆಯೋಣ, ಜೊತೆಯಲ್ಲಿ ಅಧ್ಯಯನಮಾಡಿ ತೇಜಸ್ಸು ಬೆಳಸೋಣ; ದ್ವೇಷ ಬೇಡ—ಎಂದ ದೇಶ ನಮ್ಮದು. ಇಂದಿನ ಅತಿ ಭೀಕರ ಆಗತ್ಯ ದಲ್ಲಿ ಪುನಃ ಈ ಆದರ್ಶ, ಧರ್ಮಪಕ್ಷಪಾತ ನಮ್ಮ ಕೃತಿಗಳಲ್ಲಿ ಬೆಳೆಯ ಬಲ್ಲವಾದರೆ ನಮ್ಮ ಧರ್ಮಸಂಪ್ರದಾಯ ಚರಿತಾರ್ಥವಾ

ದೀತು. ಶುದ್ಧ ಸಾಹಿತ್ಯಕೃತಿಗಳು ಹುಟ್ಟವಾದರೆ ಬಿಡಲಿ; ಯುದ್ಧದ ಹಾನಿಯನ್ನು ಕುರಿತು, ಲೋಕಶಾಂತಿಯ ಪ್ರಯೋಜನ ವನ್ನು ಕುರಿತು ತಿಳಿವಳಿಕೆಯ ಗ್ರಂಥಗಳು ನಮ್ಮಲ್ಲಿ ಹುಟ್ಟಲಿ; ಬೆಳೆಯಲಿ; ಮನಸ್ಸು ಲೋಕ ಹಿತಕ್ಕೆ ಮೃದುವಾಗಿ ಒಲಿಯಲಿ.

ಆದರೆ ಅದಕ್ಕಾಗಿ ಜನ ಎಷ್ಟನ್ನು ಮರೆಯುವುದಿದೆ? ಎಷ್ಟು ವಿರಸ ವೈಮನಸ್ಯಗಳನ್ನು ತುಳಿದಿಡಬೇಡ? ದಿನ ಜೀವನ ದಲ್ಲಿನ ಮನೋವಿಕಾರಗಳೆಷ್ಟನ್ನು ಅಡಗಿಸಬೇಡ? ಒಂದು ಮಾತಿ ನಲ್ಲಿ ಹೇಳಬೇಕಾದರೆ, ಎಷ್ಟು ಮರೆಯಬೇಕು? ಎಷ್ಟನ್ನು ಕ್ಷಮಿಸಬೇಕು ಎಂಬುದನ್ನು ನೆನೆವಾಗ ಮನಸ್ಸೂ ಹೃದಯವೂ ನಡುಗುವುವು, ತಲ್ಲಣಗೊಳ್ಳುವುವು. ಆದರೆ ಗಮ್ಯ ಹಿರಿದಾ ದಲ್ಲಿ, ಅಗತ್ಯ ಒತ್ತುತ್ತಿದ್ದರೆ, ಅಧೈರ್ಯಪಟ್ಟು ಫಲವಿಲ್ಲ. ಅಶುಭದ ಒಡಲಲ್ಲಿರುವ ಶುಭವನ್ನು ಹೀರುವ ಕಾರ್ಯದಲ್ಲಿ ನಮ್ಮ ಕಾಲದ ಸಾಹಿತಿಗಳು ಶಕ್ತಿಯಿಂದಲೂ ಭಕ್ತಿಯಿಂದಲೂ ನಡೆಯುವಂತಾಗಲಿ.

ಮುಂದಿನ ಸಾಹಿತ್ಯದಲ್ಲಿ ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ

ಕೆ. ವಿ. ಪುಟ್ಟಪ್ಪ

ಮುಂಬರುವ ಸಾಹಿತ್ಯದ ಸ್ವರೂಪವೇನು ? ಅದು ಯಾವ ಯಾವ ರೂಪಗಳಿಗೆ ತಿರುಗುತ್ತದೆ? ಯಾವ ಭಾವಗಳು, ಎಂತಹ ಶಕ್ತಿಗಳು ಅದಕ್ಕೆ ಪ್ರೇರಕವಾಗುತ್ತವೆ? ಅದರ ಉದ್ದೇಶಗಳೇನು? ಅದರ ಗುರಿಯೇನು ? ಅದು ಅನುಸರಿಸುವ ವಿಧಾನಗಳೇನು? ಈ ಪ್ರಶ್ನೆಗಳಿಗೆ ಕಣಿ ಕೇಳುವಂತೆ ಉತ್ತರ ಹೇಳುವುದು ದುಃಸಾಧ್ಯವಾದರೂ ಇಂದಿನ ಮತ್ತು ಹಿಂದಿನ ಪ್ರಪಂಚದ ಮತ್ತು ಸಾಹಿತ್ಯದ ಪರಿಸ್ಥಿತಿಯನ್ನು ಪರ್ಯಾಲೋಚಿಸಿದಲ್ಲಿ ಮುಂದೆ ಏನಾಗಬಹುದು? ಏನು ಬರಬಹುದು? ಎಂಬ ಕ್ರಾಂತದರ್ಶನ ಸ್ವಲ್ಪ ಮಟ್ಟಿಗಾದರೂ ಕಲ್ಪನಾ ಗೋಚರವಾಗಬಹುದೆಂದು ತೋರುತ್ತದೆ.

ಲೋಕದ ಇತರ ಕ್ಷೇತ್ರಗಳಲ್ಲಿರುವಂತೆ ಸಾಹಿತ್ಯದಲ್ಲಿಯೂ ಒಂದು ನಿತ್ಯಾಂಶ, ಒಂದು ಲೀಲಾಂಶ, ಒಂದು ಸ್ಥಿರಾಂಶ, ಒಂದು ಚರಾಂಶ ಇರುತ್ತದೆ. ನಿತ್ಯಾಂಶವು ತ್ರಿಕಾಲಾತೀತವಾಗಿರುವುದರಿಂದ ಸಾರ್ವಕಾಲಿಕವೆಂಬಂತೆ ತೋರುತ್ತದೆ; ಲೀಲಾಂಶ ಅಥವಾ ಚರಾಂಶವು ಕಾಲಾಧೀನವಾಗಿರುವುದರಿಂದ ಕಾಲಾತ್ಮಕವಾಗಿ ತತ್ಕಾಲಿಕವಾಗಿ ಹೊಮ್ಮುತ್ತದೆ. ಈ ಸತ್ಯ ಮಾನವ ಜೀವನದಲ್ಲಿರುವಂತೆಯೆ, ಆ ಜೀವನ ಮತ್ತು ಜೀವನಾನುಭವಗಳನ್ನು ಪ್ರತಿ ಕೃತಿಸುವ ಪ್ರತಿಬಿಂಬಿಸುವ ಪ್ರತಿಮಿಸುವ ಸಾಹಿತ್ಯದಲ್ಲಿಯೂ ಪ್ರಕಟವಾಗುತ್ತದೆ. ಎಲ್ಲಿಯಾದರೂ ನಿತ್ಯವೂ ನೂತನವಾಗಿ ಹೊಮ್ಮುವ ಆ ಚಿರತತ್ವವು ಚಿರತತ್ವವಾಗಿ

ಪ್ರಕಟಗೊಳ್ಳದಿದ್ದರೆ ಆ ಜೀವನ ಮುಗಿದು ಮೃತಸ್ಥಿತಿ ಪ್ರಾಪ್ತವಾಯಿತೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದಲೆ ಎಲ್ಲಿ ಸಾಹಿತ್ಯ ಜೀವಂತವಾಗಿರುತ್ತದೆಯೋ ಅಲ್ಲಿ ಬದಲಾವಣೆ ಪರಿವರ್ತನೆ ಅನಿವಾರ್ಯವಾಗಿ ಸಂಭವಿಸುತ್ತದೆ.

ಆದರೆ ಆ ಪರಿವರ್ತನೆ ಯಾವುದರಲ್ಲಿ ಚರಿಸುತ್ತದೆ? ಯಾವ ರೂಪದಲ್ಲಿ ಹೇಗೆ ಪ್ರಕಟವಾಗುತ್ತದೆ? ಭಾವಾಂಶದಲ್ಲಿಯೆ? ಕಲ್ಪನಾಂಶದಲ್ಲಿಯೆ? ರೂಪಾಂಶದಲ್ಲಿಯೆ? ವಸ್ತುವಿನಲ್ಲಿಯೆ? ರೀತಿ ಅಲಂಕಾರಾದಿಗಳಲ್ಲಿಯೆ? ರಸದಲ್ಲಿಯೆ?

ಪ್ರಾಣದ ತೀವ್ರ ಅಭೀಪ್ಸೆಯಿಂದ ಪ್ರಾಣಿಯ ಅಂಗಾಂಗ ವಿರಚನೆಯಲ್ಲಿ ಸನ್ನಿವೇಶಾಧೀನವಾಗಿ ಪರಿವರ್ತನೆಗಳಾಗುತ್ತವೆ ಎಂದು ಜೀವ ವಿಜ್ಞಾನ ಹೇಳುತ್ತದೆ. ಅಂತಹ ಪರಿವರ್ತನೆಗೆ ಕಾರಣ ವಿವಿಧವೂ ವ್ಯತ್ಯಸ್ತವೂ ಆಗಿರುವ ಅನುಭವಗಳ ಅಪೇಕ್ಷೆಯಿಂದಾಗಿ ಪ್ರಾಣದ ಅಥವಾ ಪ್ರಾಣಿಯ ಹೃದಯದಲ್ಲಿ ಮೂಡುವ ಉತ್ಕಟ ಅಭೀಪ್ಸೆ ಅಥವಾ ಹಾರೈಕೆ. "ಹಾರೈಸಿ ಹಾರೈಸಿ ಹಾರೈಸಿ। ಹಾರಿದುದೊ ನೀರಧಿಯ ಮೀನ!" ಕಡಲ ಮೀನಿಗೆ ರೆಕ್ಕೆ ಮೂಡಿ ಅದು ಹಕ್ಕಿಯಾದುದಕ್ಕೆ ಕಾರಣವೇನು? ಮೀನಿನ ಹೃದಯದಲ್ಲಿ ಮೂಡಿದ ಬಾನಲೆತದ ಕಡು ಹಾರೈಕೆಯಲ್ಲವೆ? ಅಂತಹ ನವಾನುಭವ ಮೂಲವಾದ ಅಭೀಪ್ಸೆಯೆ ನೈಸರ್ಗಿಕ ಪರಿವರ್ತನೆಗೆ ಕಾರಣವಾಗುತ್ತದೆ. ಅನುಭವ, ಅಭೀಪ್ಸೆ, ಅದಕ್ಕೆ ಅನುಗುಣವಾಗಿ ಅಕೃತಕವಾಗಿ ನಿಸರ್ಗ ಸಹಜವಾಗಿ ಸಂಭವಿಸುವ ರೂಪ ವ್ಯತ್ಯಾಸ—ಈ ಮೂರನ್ನು ನಾವು ಲಕ್ಷ್ಯದಲ್ಲಿಡಬೇಕು. ಏಕೆಂದರೆ ಈ ಮೂರರಲ್ಲಿ ಯಾವುದೊಂದು ಊನವಾದರೂ ವಿಕಾರ ಸೃಷ್ಟಿಯಾಗುತ್ತದೆ. ಅಂತಹ ವಿಕಾರ ಸೃಷ್ಟಿ ನೂತನವಾಗಿ ತೋರಿದರೂ ಅದಕ್ಕೆ ಬದುಕುವ

ಹಕ್ಕೆ ಇರುವುದಿಲ್ಲ. ಒಂದೆರಡು ದಿನಗಳ ಮಟ್ಟಿಗೆ ಜನರ ಕುತೂಹಲವನ್ನು ಕೆಣಕಿ ಸೆಳೆದು ಕೆರಳಿಸಿ ಸತ್ತು ಹೋಗುತ್ತದೆ, ಎರಡು ತಲೆಯ ಕೋಳಿಮರಿ ಅಥವಾ ಎಂಟುಕಾಲಿನ ಕರು ಹುಟ್ಟಿ ಅಳಿಯುವಂತೆ.

ಪ್ರಪಂಚ ಜೀವನ ಅನೇಕತೆಯಿಂದ ಏಕತೆಗೆ ಚಲಿಸುತ್ತಿದೆ. ಅನೇಕತೆಯನ್ನು ಇಲ್ಲಗೈಯುವ ಏಕತೆಯ ಕಡೆಗಲ್ಲ; ಅನೇಕತೆಯನ್ನು ಸಮನ್ವಯಗೊಳಿಸುವ ಏಕತೆಗೆ. ಅದರ ಪರಿಣಾಮವಾಗಿ, ಅಥವಾ ಮತ್ತೊಂದು ಗೂಢತರ ದೃಷ್ಟಿಯಿಂದ ಅದಕ್ಕೆ ಕಾರಣವಾಗಿ, ಒಂದು ಪೂರ್ಣ ದೃಷ್ಟಿ ಸಿದ್ಧವಾಗುತ್ತಿದೆ. ಈ ಪೂರ್ಣ ದೃಷ್ಟಿಯ ಮತ್ತು ಸಮನ್ವಯ ಬುದ್ಧಿಯ ಪರಿಣಾಮವಾಗಿ ಒಂದು ಸರ್ವ ಸಮಾನತೆಯ ಸಮತಾಭಾವ ತಲೆದೋರಿ ಸುಪ್ರತಿಷ್ಠಾಪಿತವಾಗಲು ಪ್ರಯತ್ನಿಸುತ್ತಿದೆ. ರಾಜಕೀಯ ಮತ್ತು ಆರ್ಥಿಕ ರಂಗಗಳಲ್ಲಿ ಅದು ವರ್ಣ ಪೂರ್ಣವಾಗಿ ಕಲಹ ಕೌಲುಗಳಿಂದ ರಂಜಿತವಾಗಿ ಸುಪ್ರಕಟವಾಗಿ ಗೋಚರಿಸುತ್ತದೆ. ಆದರೆ ಸಾಮಾಜಿಕ ರಂಗದಲ್ಲಿ ಧಾರ್ಮಿಕ ರಂಗದಲ್ಲಿ ಮತ್ತು ಸಾಹಿತ್ಯಾದಿ ಕಲಾ ರಂಗಗಳಲ್ಲಿಯೂ ಅದು ತನ್ನ ನಿಗೂಢ ಕಾರ್ಯದಲ್ಲಿ ತೊಡಗಿರುವುದನ್ನು ಹೊಕ್ಕು ನೋಡಿದರೆ ಕಾಣುತ್ತೇವೆ.

ಮತ ಧರ್ಮ ದೇವರು ಈ ವಿಚಾರಗಳಲ್ಲಿ ಸಂಕುಚಿತ ಭಾವಗಳು ವಿಶಾಲವಾಗುತ್ತಿವೆ. ಉಗ್ರರಾಷ್ಟ್ರೀಯತೆಯ ಸ್ವಾರ್ಥತೆ ಸ್ವಪ್ರತಿಷ್ಠೆಗಳು ಅಂತರರಾಷ್ಟ್ರೀಯತೆಯ ಕೊಳುಕೊಡೆಯ ಮೈತ್ರಿಗೆ ಹೆಚ್ಚುಹೆಚ್ಚು ಶರಣಾದಲ್ಲದೆ ಶಾಂತಿ ಕ್ಷೇಮಗಳು ಯಾವ ಒಂದು ದೇಶಕ್ಕೂ, ಅದು ಎಷ್ಟೇ ದೊಡ್ಡದಾಗಿರಲಿ ಬಲವಾಗಿರಲಿ ಶ್ರೀಮಂತವಾಗಿರಲಿ ಲಭಿಸುವುದಿಲ್ಲ, ದಕ್ಕುವುದಿಲ್ಲ ಎಂಬ ಬುದ್ಧಿ ರಾಜಕಾರಣಿಗಳಲ್ಲಿ ಎಂದಿಗಿಂತಲೂ ಅತಿಶಯವಾಗಿ ಮೂಡು

ತ್ತಿರುವಂತೆ ತೋರುತ್ತಿದೆ. ಸಂಪತ್ತಿನ ವಿನಿಯೋಗದಲ್ಲಿ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಮೂಲತತ್ವದ ಅನುಷ್ಠಾನ ದಿನದಿನಕ್ಕೂ ಹಬ್ಬಿ ದಿಗ್ವಿಜಯ ಸಾಧಿಸುತ್ತಿದೆ; ಸರ್ವೋದಯ ಸಿದ್ಧಾಂತ ಸಂಸ್ಥಾಪಿತವಾಗುತ್ತಿದೆ.

ಇದನ್ನೆಲ್ಲ ಗಮನಿಸಿದರೆ ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿ, ಈ ಮೂರು ಮಹಾ ತತ್ವಗಳು ಜಗತ್ತಿನ ಮುಂದಿನ ಬಾಳಿನ ಮೂಲ ಮಂತ್ರಗಳಾಗುವುದರಲ್ಲಿ ಸಂದೇಹವಿಲ್ಲ. ಆ ಬಾಳನ್ನು ನಿರೂಪಿಸುವುದರಲ್ಲಿಯೂ ರೂಪಿಸುವುದರಲ್ಲಿಯೂ ಸ್ಥಾಪಿಸುವುದರಲ್ಲಿಯೂ ಆಸಕ್ತವಾಗುವ ಮುಂದಿನ ಸಾಹಿತ್ಯಕ್ಕೂ ಆ ಮೂಲ ಮಂತ್ರತ್ರಯಗಳೆ ದರ್ಶನವಾಗಿ ಮಾರ್ಗದರ್ಶಕವಾಗುತ್ತವೆ. ಆ "ದರ್ಶನ"ದ ಅಭಿವ್ಯಕ್ತಿಗೆ ಆವಶ್ಯಕವಾಗುವ "ನಿದರ್ಶನ" ವನ್ನು ಸಾಹಿತ್ಯ ಹೊಸದಾಗಿ ಹುಟ್ಟಿಸಿಕೊಳ್ಳಲೂ ಬಹುದು; ಅಥವಾ ಹಳೆಯ ಸಾಮಗ್ರಿಯಿಂದಲೆ ಕಟ್ಟಿಕೊಳ್ಳಲೂ ಬಹುದು. ಅದರ 'ಪ್ರದರ್ಶನ'ಕ್ಕೆ ಬೇಕಾದ ಕಾವ್ಯ ಶರೀರವೂ ತನಗೆ ತಾನೆ ಸಿದ್ಧವಾಗುತ್ತದೆ. ಹಳೆಯ ರೂಪಗಳು ಸಾಲದಿದ್ದರೆ ಹೊಸರೂಪಗಳನ್ನು ಕಂಡುಕೊಳ್ಳುತ್ತದೆ; ಕಟ್ಟಿಕೊಳ್ಳುತ್ತದೆ. ಆದರೆ ಯಾವ ಶರೀರವಾಗಲಿ ರೂಪವಾಗಲಿ ಅನುಭವ ಅಭೀಪ್ಸೆಗಳ ಒತ್ತಡದಿಂದ ಸಹಜವಾಗಿಯೇ ಮೂಡಬೇಕಾದುದು ಮಾತ್ರ ಆವಶ್ಯಕ. ಏಕೆಂದರೆ, ಸಾಹಿತ್ಯ ಶರೀರದಲ್ಲಿ, ಎಂದರೆ ಅದರ ರೂಪಾಂಶದಲ್ಲಿ ಏನೆ ಪರಿವರ್ತನೆಗಳುಂಟಾದರೂ ಅದು ರಸಾಭಿವ್ಯಕ್ತಿಗೆ ಸಾಧನವಾಗದಿದ್ದರೆ ವ್ಯರ್ಥವಾಗುತ್ತದೆ. ಏಕೆಂದರೆ, ರಸವೆ ನಿತ್ಯಾಂಶ; ಉಳಿದುದೆಲ್ಲವೂ ಅದರ ಹೊಮ್ಮಿಕೆಗೆ ವಿಲಾಸಲಾಗಿರುವ ಲೀಲಾಂಶ.

ಉಪಸಂಹಾರ

ಜಿ. ಪಿ. ರಾಜರತ್ನಂ

ಸಾಹಿತ್ಯವನ್ನು ಇಷ್ಟು ಜನ ಇಷ್ಟೆಲ್ಲ ಹೇಳಿದ್ದರೂ, ಹೇಳಬೇಕಾದ್ದನ್ನೆಲ್ಲ ಹೇಳಿ ಮುಗಿಸಿಯಾಯಿತು—ಎಂದು ಯಾರೂ ಭಾವಿಸಬಾರದು. ಏಕೆಂದರೆ, ಬದುಕಿನ ಅನಂತ ಮುಖಗಳ ಪರಿಚಯವನ್ನು ಒಂದು ಆಯುಷ್ಯದಲ್ಲಿ ಪಡೆದು ಮುಗಿಸುವುದು ಹೇಗೆ ಅಸಾಧ್ಯವೋ, ಅದಕ್ಕಿಂತ ಅಸಾಧ್ಯ—ಒಂದು ಗಂಟೆಯಲ್ಲಿ ಬದುಕಿನಿಂದ ಕಡೆದು ಬಂದ ಸಾಹಿತ್ಯದ ಅನಂತ ಮುಖಗಳನ್ನು ಮುಟ್ಟುವದಾದರೂ. ಹಾಗೆಂದು, ಆದಷ್ಟು ಮುಖಗಳನ್ನು ಮುಟ್ಟದೆ ನಿಲ್ಲುವಂತೆಯೂ ಇಲ್ಲ. ಮಂಕುತಿಮ್ಮನ ಕಗ್ಗದಲ್ಲಿ ಒಂದು ಪದ್ಯ ಹೇಳುತ್ತದೆ—ನಮಗೆ—ಅರೆಗಣ್ಣು ಎಂದು ಕೊರಗಿ ಫಲವೇನು? ಜಗತ್ತಿನಲ್ಲಿ ಅರೆ ಬೆಳಕು ಎಂದು ಮರುಗಿ ಫಲವೇನು? ಇರುವ ಕಣ್ಣಿನಲ್ಲಿ ಇರುವ ಬೆಳಕಿನಲ್ಲಿ ಆದಷ್ಟು ನೋಡಿದರೆ—ಅದೇ ಲಾಭ! ಅದರಂತೆ—ಈ ಸಾಯಂಕಾಲದ ಸಾಹಿತ್ಯ ಕಾರ್ಯಕ್ರಮ.

ಮಂಕುತಿಮ್ಮನ ಇನ್ನೊಂದು ಪಂಕ್ತಿ ನೆನಪಾಗುತ್ತದೆ. "ತರಣಿ ದರ್ಶನಕಿಂತ ಕಿರಣಾನುಭವ ಸುಲಭ." ಸಾಹಿತ್ಯ, ಬದುಕಿಗೆ ಸೂರ್ಯನಿದ್ದ ಹಾಗೆ. ಸಾಹಿತ್ಯ ಸೂರ್ಯನ ನಾಲ್ಕಾರು ಕಿರಣಗಳನ್ನು ಇಲ್ಲಿ ಅನುಭವಿಸಿದ್ದೇವೆ. ಈ ಅನುಭವದಿಂದ ಈ ಸೂರ್ಯನ ಉಪಾಸನೆಯಲ್ಲಿ ಶ್ರದ್ಧೆ ಬಲಿತು, ಆದರಿಂದ ನಮಗೆ ತುಷ್ಟಿ, ಪುಷ್ಟಿ, ಶಾಂತಿಗಳು ಲಭಿಸುವಂತಾಗಲಿ.

ಜೈ ಹಿಂದ್

ವಿದ್ಯಾಪ್ರಸಾರ ಪುಸ್ತಕಗಳು

He who destroys a good book kills reason itself, kills the image of God as it were in the eye.

—*John Milton*

ಇದು ಪ್ರಜಾರಾಜ್ಯದ ಕಾಲ. ಈಗ ರಾಜ್ಯಕಾರ್ಯಗಳೆಲ್ಲ ಪ್ರಜೆಗಳ ಇಷ್ಟದಂತೆಯೇ ನಡೆಯುತ್ತದೆ. ಪ್ರಜೆಗಳ ಜ್ಞಾನಾನುಭವಗಳಿಗೂ ವಿವೇಕಕ್ಕೂ ತಕ್ಕಂತೆ ರಾಜ್ಯದ ಉನ್ನತಿ ಅಥವಾ ಅವನತಿ. ಅವರ ತಿಳಿವಳಿಕೆಯ ಮಟ್ಟವನ್ನು ಹೆಚ್ಚಿಸುವುದೇ ರಾಜ್ಯದ ಭದ್ರತೆಯ ದೃಷ್ಟಿಯಿಂದ ಮಾಡಬೇಕಾದ ಮೊದಲನೆಯ ಕಾರ್ಯ.

ಹೀಗೆ ಅತ್ಯಗತ್ಯವಾದ ಪ್ರಜಾಬೋಧೆಯ ಸತ್ಕಾರ್ಯಕ್ಕೆ ಈ ಪುಸ್ತಕಮಾಲೆ ಸಹಕಾರಿಯಾಗಿದೆ.

ಮಾಲೆಯ ಪುಸ್ತಕಗಳು :

೧	ರಾಜ್ಯಾಂಗ ತತ್ತ್ವಗಳು—ಡಿ.ವಿ.ಜಿ.		ರೂ. ೧ ೦ ೦
೨	ವೃತ್ತಪತ್ರಿಕೆ	,,	(ಅಚ್ಚಿನಲ್ಲಿ)
೩	ರಾಜಕೀಯ ಪ್ರಸಂಗಗಳು	,,	(ಅಚ್ಚಿನಲ್ಲಿ)
೪	ಸಾಹಿತ್ಯಶಕ್ತಿ	,,	೨ ೪ ೦
೫	ನವ್ಯಸಾಹಿತ್ಯ ನಿರ್ಮಾಣ		೦ ೪ ೦
೬	ವಿಮರ್ಶೆ ಮತ್ತು ಸಾಹಿತ್ಯ		(ಅಚ್ಚಿನಲ್ಲಿ)

ಕಾವ್ಯಾಲಯ : ಪ್ರಕಾಶಕರು : ಮೈಸೂರು